ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಮುಲ್ಲನಪುರದಲ್ಲಿ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅಜೇಯ 69 ರನ್ ಗಳಿಸಿದ ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಬ್ಯಾಟಿಂಗ್ ವೈಖರಿ... ಪಂಜಾಬ್‌ಗೆ 6 ವಿಕೆಟ್ ಜಯ...


12 ಏಪ್ರಿಲ್ 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 33 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಮಧ್ಯಮ ವರ್ಗದ ಜನ ಉಳಿತಾಯ ಮಾಡುತ್ತಿಲ್ಲವೇ? » 2



ವಿದ್ಯಾವಂತರಿಂದಲೇ ಕರ್ಮ ಸಿದ್ಧಾಂತ ಪಾಲನೆ » 3



ಪೆಹಲ್ಗಾಮ್ ದಾಳಿಯಿಂದ ಪಾಕಿಸ್ತಾನ ಘನತೆ ಹೆಚ್ಚಿದೆ » 4


# ಸಿದ್ದರಾಮಯ್ಯ ಮೋದಿ ನೋಡಿ ಕಲಿಯಲಿ

## ಅತ್ಯಂತ ಕೆಟ್ಟ ಸರ್ಕಾರ ರಾಜ್ಯದಲ್ಲಿದೆ : ಕಾಂಗ್ರೆಸ್ ವಿರುದ್ಧ ಹೆಚ್.ಡಿ.ದೇವೇಗೌಡ ವಾಗ್ದಾಳಿ

• ಪ್ರಜೋದಯ ವರದಿ

**ಬೆಂಗಳೂರು:** ಈ ನಾಡು ಕಂಡ ಅತ್ಯಂತ ಕೆಟ್ಟ ಸರ್ಕಾರ ರಾಜ್ಯದಲ್ಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಿ ನರೇಂದ್ರ ಮೋದಿ ಅವರನ್ನು ನೋಡಿ ಕಲಿಯಬೇಕೆಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಕಾಂಗ್ರೆಸ್ ಪಕ್ಷ ಹಾಗು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

ಜೆಡಿಎಸ್ ಬೆಳ್ಳಿಹಬ್ಬದ ಅಂಗವಾಗಿ ಶನಿವಾರ ಕೆಂಗೇರಿ ಬಳಿಯ ಕೊಮ್ಮಘಟ್ಟದ ಬಳಿ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಸರ್ಕಾರ ತೆಗೆಯುವಂತೆ ಮಾಡಿ ದರು. ಆಗ ಮೋದಿ ಅವರು ನಮ್ಮ ಜೊತೆಗೆ ಬನ್ನಿ ಎಂದು ಕರೆದರು, ನಾನು ಸರಿ ಎಂದು ಕೈಜೋಡಿಸಿದ್ದೇನೆ. ಕಾಂಗ್ರೆಸ್ ಜೊತೆ ಇದ್ದು ಏಟಿನ ಮೇಲೆ ಏಟು ತಿಂದಿದ್ದೇವೆ. ಹಾಗಾಗಿ ಮೋದಿ ಜೊತೆಗೆ ಹೋಗಲು ಕುಮಾರಸ್ವಾಮಿಗೆ ಒಪ್ಪಿಗೆ ಕೊಟ್ಟೆ. ಈಗ ಕೇಂದ್ರ ಸಚಿವರಾಗಿ ಕೆಲಸ ಮಾಡಲು ಅವಕಾಶ ಕೊಟ್ಟಿದ್ದಾರೆ ಎಂದರು.

ಮುಸ್ಲಿಂ ನಾಯಕನನ್ನು ಗೆಲ್ಲಿಸಲು ದರಿದ್ರ ನಾರಾಯಣ ರ್‍ಯಾಲಿ ಮಾಡಿದೆ. ಆ ರ್‍ಯಾಲಿಗೆ ಸಿದ್ದರಾಮಯ್ಯ ಬರಲಿಲ್ಲ. ಕುಮಾರಸ್ವಾಮಿ ಸರ್ಕಾರ ತೆಗೆದಿದ್ದೂ ಕೂಡ ಅವರೇ. ಸಿದ್ದರಾಮಯ್ಯ ಮೋದಿಯನ್ನು ನೋಡಿ ಕಲಿಯಬೇಕು. ನಿತೀಶ್ ಕುಮಾರ್ 20 ವರ್ಷ ಬಿಹಾರ ಮುಖ್ಯಮಂತ್ರಿ ಆಗಿದ್ದರು, ನಿತೀಶ್‌ಗೆ ಶಕ್ತಿ ಕೊಟ್ಟಿದ್ದು ಮೋದಿ ಎಂದು ಹೊಗಳಿದರು.



ರಾಜ್ಯ ಕಾಂಗ್ರೆಸ್ ಸರ್ಕಾರ ಕುಮಾರಸ್ವಾಮಿಗೆ ಸಹಕಾರ ನೀಡುತ್ತಿಲ್ಲ. ಹೆಚ್ಎಂಟಿ ಜಾಗದ ವಿಚಾರವಾಗಿ ಕೋರ್ಟ್‌ಗೆ ಹೋಗುತ್ತಾರೆ. ರಾಷ್ಟ್ರೀಯ ಪಕ್ಷದ ಜೊತೆ ಕೆಲಸ ಮಾಡುವಾಗ ನಮಗೂ ಇತಿಮಿತಿ ಇದೆ. ರಾಜ್ಯದಲ್ಲಿ ಅತ್ಯಂತ ನಾಡುಕಂಡ ಕೆಟ್ಟ ಸರ್ಕಾರ ಇದೆ. 2 ವರ್ಷ ಈ ಸರ್ಕಾರ ಇರಬಹುದೆಂದು ಅಸಮಾಧಾನ ವ್ಯಕ್ತಪಡಿಸಿದರು.

ನರೇಂದ್ರ ಮೋದಿ ಅವರು ಅಧಿಕಾರಕ್ಕೆ ಬಂದ ಮೇಲೆ 2023-24ರಲ್ಲಿ ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿಯಲ್ಲಿ ತಂದು ರಾಜ್ಯಸಭೆ, ಲೋಕಸಭೆಯಲ್ಲಿ ಅಂಗೀಕರಿಸಿದ್ದಾರೆ. ಈ ಬಗ್ಗೆ ಏಪ್ರಿಲ್ 16, 17, 18 ಸಂಸತ್ತಿನಲ್ಲಿ ಚರ್ಚೆ ನಡೆಯ ಲಿದೆ. 545 ಲೋಕಸಭಾ ಸ್ಥಾನ 858 ಕ್ಕೆ ಹೆಚ್ಚುತ್ತದೆ. ಕರ್ನಾಟಕದ ಕ್ಷೇತ್ರಗಳ ಸಂಖ್ಯೆ 28ರಿಂದ 42ಕ್ಕೆ ಏರುತ್ತದೆಂದು ಮೋದಿ ಸರ್ಕಾರದ ಸಾಧನೆಗಳನ್ನು ಬಣ್ಣಿಸಿದರು.

**ಜೆಡಿಎಸ್ ಕುಟುಂಬದ ಪಕ್ಷವಲ್ಲ**

ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಮಾತನಾಡಿ, ಬೆಂಗಳೂರಿಗೆ ಕಾಂಗ್ರೆಸ್ ಸರ್ಕಾರದ ಕೊಡುಗೆ ಏನು ಇಲ್ಲ. ದೇವೇಗೌಡರು, ಕುಮಾರಸ್ವಾಮಿ ಕಾಲದಲ್ಲಿ ಬೆಂಗಳೂರಿಗೆ ಸಾಕಷ್ಟು ಅಭಿವೃದ್ಧಿ ಯೋಜನೆಗಳನ್ನು ನೀಡಿದ್ದಾರೆ. ಕಾವೇರಿ ನೀರು ಕೊಟ್ಟವರು ದೇವೇಗೌಡ, ಐಟಿ- ಬಿಟಿ ಕ್ಷೇತ್ರ ಬೆಳೆಸಿದ್ದು ದೇವೇಗೌಡರು. ಬಿಬಿಎಂಪಿ ಮಾಡಿದ್ದು ಕುಮಾರಸ್ವಾಮಿ, ಕಾಂಗ್ರೆಸ್ ಅದನ್ನು ಜಿಬಿಎ ಅಂತ ಹೆಸರು ಬದಲಾವಣೆ ಮಾಡಿದ್ದೇ ಸಾಧನೆ. ಕಾಂಗ್ರೆಸ್ ಆಡಳಿತದಲ್ಲಿ ಬೆಂಗಳೂರು ಅಭಿವೃದ್ಧಿ ಕುಸಿದು ಹೋಗಿದೆ ಎಂದು ಟೀಕಿಸಿದರು.

ಕುಮಾರಸ್ವಾಮಿ ದೇಶದಲ್ಲಿ ಮೊದಲ ಬಾರಿಗೆ ಗ್ರಾಮ ವಾಸ್ತವ್ಯ ಮಾಡಿದರು. ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಆರ್ಥಿಕ ಸಹಾಯ ಮಾಡಿದರು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದೇ ಸಹಾಯ ಮಾಡಿಲ್ಲ. ಜೆಡಿಎಸ್ ದೇವೇಗೌಡ ಮತ್ತು ಅವರ ಕುಟುಂಬಕ್ಕೆ ಇರುವ ಪಕ್ಷವಲ್ಲ. ಸಾಮಾಜಿಕ ನ್ಯಾಯದ ಬಗ್ಗೆ ಚರ್ಚೆ ಮಾಡಲು ಎಲ್ಲಿ ಬೇಕಾದರೂ ಬರಲು ನಾನು ಸಿದ್ಧ. ನನ್ನ ರಾಜಕೀಯ ಇತಿಹಾಸದಲ್ಲಿ ಕಂಡ ಅತ್ಯಂತ ಕೆಟ್ಟ ಸರ್ಕಾರ ಇದಾಗಿದೆ ಎಂದು ವಾಗ್ದಾಳಿ ನಡೆಸಿದರು.

### ಗ್ರಹಣ ಬಿಡಿಸಲು ಒಂದು ಅವಕಾಶ ಕೊಡಿ

ಒಂದು ಬಾರಿ ಜೆಡಿಎಸ್‌ಗೆ ಅಧಿಕಾರ ಕೊಟ್ಟರೆ ರಾಜ್ಯಕ್ಕೆ ಹಿಡಿದಿರುವ ಗ್ರಹಣವನ್ನು ಮುಕ್ತ ಮಾಡುತ್ತೇನೆ. ಎರಡು ಬಾರಿ ಜನರ ಆಶೀರ್ವಾದದಿಂದ ನಾನು ಮುಖ್ಯಮಂತ್ರಿ ಆಗಿಲ್ಲ. ಒಂದು ಬಾರಿ ಜೆಡಿಎಸ್‌ಗೆ ಅವಕಾಶ ನೀಡುವಂತೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮನವಿ ಮಾಡಿದರು.

## ಅಲ್ಪಸಂಖ್ಯಾತ ಅಧ್ಯಕ್ಷ ಸ್ಥಾನಕ್ಕೆ ಜಬ್ಬಾರ್ ರಾಜೀನಾಮೆ

• ಪ್ರಜೋದಯ ವರದಿ



**ಬೆಂಗಳೂರು:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಅಡ್ಡಿಯಾದರು ಎಂಬ ವರದಿ ಹೈಕಮಾಂಡ್‌ಗೆ ತಲುಪಿದ ಬೆನ್ನಲ್ಲೇ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರು ಕೆಪಿಸಿಸಿ ಅಲ್ಪಸಂಖ್ಯಾತ ಘಟಕ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಆಕಾಂಕ್ಷಿಯಾಗಿದ್ದ ಅಬ್ದುಲ್ ಜಬ್ಬಾರ್‌ಗೆ ಟಿಕೆಟ್ ನಿರಾಕರಣೆ ಮಾಡಲಾಗಿತ್ತು. ಅವರ ಬದಲಾಗಿ ಸಮರ್ಥ್ ಶಾಮನೂರುಗೆ ಟಿಕೆಟ್ ನೀಡಲಾಗಿತ್ತು. ಇದು ಸಚಿವ ಜಮೀರ್ ಅಹ್ಮದ್ ಖಾನ್ ಹಾಗು ಬೆಂಬಲಿಗರ ಅಸಮಾಧಾನಕ್ಕೆ ಕಾರಣವಾಗಿತ್ತು. ಈ ನಡುವೆ ಅಬ್ದುಲ್ ಜಬ್ಬಾರ್ ಅವರು ಸಮರ್ಥ್ ಪರವಾಗಿ ಪ್ರಚಾರ ನಡೆಸಿರಲಿಲ್ಲ.

ಸಮರ್ಥ್‌ಗೆ ಟಿಕೆಟ್ ಕೊಟ್ಟಿದ್ದಕ್ಕೆ ಜಬ್ಬಾರ್ ವಿರೋಧ ವ್ಯಕ್ತಪಡಿಸಿದ್ದರು. ಬಳಿಕ ಸಾಮಾಜಿಕ ಜಾಲತಾಣದಲ್ಲಿ ಸಮರ್ಥ್ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದರೂ, ಪ್ರಚಾರ ದಿಂದ ದೂರ ಉಳಿದಿದ್ದರು. ಸಾದಿಕ್ ಪೈಲ್ವಾನ್ ಬಂಡಾಯ ಶಮನ ಸಂದರ್ಭದಲ್ಲೂ ಜಬ್ಬಾರ್ ಕಾಣಿಸಿಕೊಂಡಿರಲಿಲ್ಲ. ಈ ನಡುವೆ ಅಬ್ದುಲ್ ಜಬ್ಬಾರ್ ಅವರಿಗೆ ನೋಟಿಸ್ ಜಾರಿಗೊಳಿಸಲು ಕೆಪಿಸಿಸಿ ಸಿದ್ಧತೆ ನಡೆಸಿತ್ತು. ರಾಜ್ಯ ಕಾಂಗ್ರೆಸ್ ಉಸ್ತು ವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಹೈಕಮಾಂಡ್ ನಾಯಕರಿಗೆ ವರದಿ ನೀಡಿದ್ದರು. ಪಕ್ಷದ ನಿಲುವಿಗೆ ವಿರುದ್ಧವಾಗಿ ನಡೆದುಕೊಂಡ ಹಿನ್ನಲೆಯಲ್ಲಿ ನೋಟೀಸ್ ನೀಡಿ ಉತ್ತರ ಕೊಡುವಂತೆ ಸೂಚಿಸುವ ಸಾಧ್ಯತೆ ಇತ್ತು. ಈ ಬೆಳವಣಿಗೆಯ ನಡುವೆಯೂ ಅಬ್ದುಲ್ ಜಬ್ಬಾರ್ ಅವರು ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅವರ ರಾಜೀನಾಮೆ ಅಂಗೀಕಾರ ಆಗಿರುವ ಬಗ್ಗೆ ಅಧಿಕೃತ ಮಾಹಿತಿ ತಿಳಿದುಬಂದಿಲ್ಲ.

**ಜಮೀರ್ ನಡೆಯೂ ಕುತೂಹಲ**

ಸಲೀಂ ಅಹ್ಮದ್ ಮತ್ತು ರಿಜ್ವಾನ್ ಅವರು ಶುಕ್ರವಾರ ನಡೆಸಿದ ಸುದ್ದಿಗೋಷ್ಠಿಯಲ್ಲಿ ಪಕ್ಷದಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಈ ಬೆಳವಣಿಗೆಯ ಬಗ್ಗೆ ಸಚಿವ ಜಮೀರ್ ಅಹ್ಮದ್ ಪ್ರತಿಕ್ರಿಯೆ ನೀಡಿಲ್ಲ. ಜಮೀರ್ ಅವರ ಸಮ್ಮತಿ ಯಲ್ಲೇ ಸಮರ್ಥ್ ಹೆಸರು ಅಂತಿಮಗೊಳಿ ಸಲಾಗಿತ್ತು ಎಂದು ಸಲೀಂ ಹೇಳಿದ್ದರು. ಇದೀಗ ಮುಂದಿನ ಬೆಳವಣಿಗೆ ಏನು ಎಂಬುದು ಕುತೂಹಲ ಮೂಡಿಸಿದೆ.

## ಔಷಧಿ ಕೊರತೆ ಆರೋಪ: ಆಸ್ಪತ್ರೆಗೆ ಶಾಸಕ ದಿಢೀರ್ ಭೇಟಿ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಔಷಧಿ ಕೊರತೆ ಇದೆ ಎಂದು ಆರೋಪಿಸಿ ಸಾಮಾಜಿಕ ಜಾಲತಾಣದಲ್ಲಿ ಸುದ್ದಿ ಹರಿದಾಡಿದ ಹಿನ್ನಲೆ ಶಾಸಕ ಸಿಮೆಂಟ್ ಮಂಜು ಅವರು ಶನಿವಾರ ಸಂಜೆ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ರೋಗಿಗಳೊಂದಿಗೆ ಚಿಕಿತ್ಸೆಯ ಗುಣಮಟ್ಟ, ಆಸ್ಪತ್ರೆಯ ಮೂಲಭೂತ ಸೌಕರ್ಯ ಗಳು ಮತ್ತು ಕುಂದು ಕೊರತೆಗಳ ಕುರಿತು ಮಾಹಿತಿ ಪಡೆದುಕೊಂಡರು. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಮೂರು ದಿನಗಳ ಹಿಂದೆಯಷ್ಟೇ ನ್ಯಾಯಾಧೀಶರು ಕೂಡ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.

ಏ.8 ರಂದು ಭೀಮ್ ಆರ್ಮಿ ಕರ್ನಾಟಕ ಏಕತಾ ಮಿಷನ್ ಜಿಲ್ಲಾ ಉಪಾಧ್ಯಕ್ಷ ನವೀನ್ ಸಾಲಗಾಮೆ ಅವರು ತಮ್ಮ ಮಗನಿಗೆ ಚಿಕಿತ್ಸೆ ಕೊಡಿಸಲೆಂದು ಆಸ್ಪತ್ರೆಗೆ ತೆರಳಿದ್ದ ವೇಳೆ ಆಸ್ಪತ್ರೆ ಯಲ್ಲಿ ಔಷಧ ಇಲ್ಲದೆ ಹೊರಗೆ ಬರೆದುಕೊಡಲಾಗಿದೆ ಎಂದು ಆರೋಪಿಸಿ ತಮ್ಮ ಫೇಸ್‌ಬುಕ್‌ನಲ್ಲಿ ಲೈವ್ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು. ಈ ವಿಚಾರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಹಿನ್ನಲೆ ಆಸ್ಪತ್ರೆ ವೈದ್ಯಾಧಿಕಾರಿ ಔಷಧಿ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿದ್ದರು. ಈ ವಿಚಾರವಾಗಿ ಪರ-ವಿರೋಧ ಚರ್ಚೆ ನಡೆಯುತ್ತಿರುವ ಹಿನ್ನಲೆ ಶಾಸಕ ಸಿಮೆಂಟ್ ಮಂಜು ಅವರು ಕೂಡ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.



### ಅರಣ್ಯ ಇಲಾಖೆಯೊಂದಿಗೆ ಜಿಲ್ಲಾಧಿಕಾರಿ ಚರ್ಚೆ | ಶೀಘ್ರದಲ್ಲೇ ನಿಯಮ ಜಾರಿ ಸಾಧ್ಯತೆ

## ಜಿಲ್ಲೆಯಲ್ಲಿ ನಿಯಮಬದ್ಧ ಟ್ರೆಕ್ಕಿಂಗ್ ಅವಕಾಶಕ್ಕೆ ಚಿಂತನೆ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಅಕ್ಕಪಕ್ಕದ ಜಿಲ್ಲೆಗಳಲ್ಲಿ ಟ್ರೆಕ್ಕಿಂಗ್ ಹೋದ ಸಂದರ್ಭದಲ್ಲಿ ಉಂಟಾದ ಅನಾಹುತ ಗಳನ್ನು ಗಮನದಲ್ಲಿಟ್ಟಿಕೊಂಡು ಜಿಲ್ಲೆಯಲ್ಲಿರುವ ಟ್ರೆಕ್ಕಿಂಗ್ ಸ್ಥಳಗಳನ್ನು ಗುರುತಿಸಿ ನಿಯಮ ಬದ್ಧ ಚಾರಣಕ್ಕೆ ಸೂಕ್ತ ಭದ್ರತೆಯೊಂದಿಗೆ ಅವಕಾಶ ಕಲ್ಪಿಸಲು ಜಿಲ್ಲಾಡಳಿತ ಮುಂದಾಗಿದೆ.

ಸಕಲೇಶಪುರತಾಲ್ಲೂಕು ವ್ಯಾಪ್ತಿಯ ಪಶ್ಚಿಮಘಟ್ಟದ ಪ್ರಕೃತಿ ಸೊಬಗನ್ನು ಟ್ರೆಕ್ಕಿಂಗ್ ಕೇಂದ್ರವನ್ನಾಗಿಸಲು ಜಿಲ್ಲಾಡಳಿತ ಮುಂದಾಗಿದೆ. ಪ್ರವಾಸೋದ್ಯಮಕ್ಕೆ ಹೊಸ ಚೈತನ್ಯ ನೀಡುವ ಉದ್ದೇಶದಿಂದ ಚಾರಣ ಸ್ಥಳಗಳನ್ನು ಗುರುತಿಸಿ ನಿಯಮಬದ್ಧವಾಗಿ ಪ್ರವಾಸಿಗರಿಗೆ ಅವಕಾಶ ಕಲ್ಪಿಸುವ ಯೋಜನೆ ಜಾರಿಗೆ ತರಲು ಜಿಲ್ಲಾಡಳಿತವು ಅರಣ್ಯ ಇಲಾಖೆಯೊಂದಿಗೆ ನಡೆಸಿದ ಸಭೆಯಲ್ಲಿ ಟ್ರೆಕ್ಕಿಂಗ್ ವ್ಯವಸ್ಥೆಯನ್ನು ಸುರಕ್ಷಿತ ಮತ್ತು ನಿಯಂತ್ರಿತ ರೀತಿಯಲ್ಲಿ ರೂಪಿಸುವ ಕುರಿತು ಚರ್ಚೆ ನಡೆಸಲಾಗಿದೆ.

ಚಾರಣಕ್ಕೆ ಬರುವ ಪ್ರವಾಸಿಗರ ಸಂಖ್ಯೆ ನಿಯಂತ್ರಣ, ಪರಿಸರ ಸಂರಕ್ಷಣೆ ಹಾಗು ಸ್ಥಳೀಯ ರಿಗೆ ಉದ್ಯೋಗಾವಕಾಶ ಕಲ್ಪಿಸುವ ದೃಷ್ಟಿಯಿಂದ ಸಮಗ್ರ ಮಾರ್ಗಸೂಚಿ ಸಿದ್ಧಪಡಿಸಲು ತೀರ್ಮಾನಿಸಲಾಗಿದೆ.



### ಚಾರಣಕ್ಕೆ ಗುರುತಿಸಿರುವ ಸ್ಥಳಗಳು

ಚಾರಣಕ್ಕೆ ಸೂಕ್ತ ಎನಿಸುವ ಸಕಲೇಶಪುರ ತಾಲ್ಲೂಕಿನ ಪ್ರಮುಖ ಬೆಟ್ಟಗಳನ್ನು ಆಯ್ಕೆ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಗವಿಬೆಟ್ಟ, ಪಟ್ಲಬೆಟ್ಟ, ಮೂರುಕಣ್ಣುಗುಡ್ಡ ಹಾಗು ಹೊಸಹಳ್ಳಿ ಗುಡ್ಡಗಳಲ್ಲಿ ಚಾರಣಕ್ಕೆ ಅವಕಾಶ ನೀಡುವ ಬಗ್ಗೆ ಚಿಂತನೆ ನಡೆದಿದೆ. ಈ ಪ್ರದೇಶಗಳು ದಟ್ಟ ಕಾಡು, ಮಂಜು ಮುಸುಕಿದ ಬೆಟ್ಟಗಳು ಹಾಗು ನೈಸರ್ಗಿಕ ಜಲಪಾತಗಳಿಂದ ಪ್ರಸಿದ್ಧವಾಗಿವೆ. ಅರಸೀಕೆರೆ ಜೇನುಕಲ್ಲು ಬೆಟ್ಟದಲ್ಲೂ ಚಾರಣ ನಡೆಸಬಹುದೇ ಎಂದು ಪರಿಶೀಲಿಸಲಾಗುತ್ತಿದೆ.



**ಅರಣ್ಯಕ್ಕೆ ಹಾನಿಯಾಗುವುದನ್ನು ತಡೆಯುವ ನಿಟ್ಟಿನಲ್ಲಿ ಕೆಲ ಸೂಕ್ಷ್ಮ ಪ್ರದೇಶಗಳಲ್ಲಿ ಟ್ರೆಕ್ಕಿಂಗ್ ಸಂಪೂರ್ಣವಾಗಿ ನಿಷೇಧಿಸಿದೆ. ಜಿಲ್ಲೆಯಲ್ಲಿ ಪ್ರವಾಸೋದ್ಯಮ ಬೆಳೆಸುವ ನಿಟ್ಟಿನಲ್ಲಿ ಟ್ರೆಕ್ಕಿಂಗ್‌ಗೆ ಸಮಯ ಮತ್ತು ಶುಲ್ಕವನ್ನು ನಿಗದಿಗೊಳಿಸಿ, ಚಾರಣಕ್ಕೆ ಎಷ್ಟು ಜನರಿಗೆ ಅವಕಾಶ ನೀಡ ಬೇಕೆಂದು ಅರಣ್ಯ ಇಲಾಖೆಯೊಂದಿಗೆ ಚರ್ಚಿಸಿ ಅವಕಾಶ ಮಾಡಿಕೊಡ ಲಾಗುವುದು.**

**-ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

**ನಿಯಂತ್ರಣಕ್ಕೆ ಹಲವು ನಿಯಮ**

ಟ್ರೆಕ್ಕಿಂಗ್ ವ್ಯವಸ್ಥೆಯನ್ನು ನಿಯಂತ್ರಣದಲ್ಲಿಡಲು ಜಿಲ್ಲಾಡಳಿತ ಹಲವು ಪ್ರಮುಖ ಅಂಶಗಳನ್ನು ಪರಿಗಣಿಸಿದೆ. ಅವುಗಳಲ್ಲಿ ಪ್ರತಿ ಪ್ರವಾಸಿಗರಿಗೆ ಶುಲ್ಕ ನಿಗದಿ, ಬೆಳಿಗ್ಗೆಯಿಂದ ಸಂಜೆವರೆಗೆ ಮಾತ್ರ ಚಾರಣಕ್ಕೆ ಅನುಮತಿ ಹಾಗು ಅರಣ್ಯ ಪ್ರದೇಶಗಳಲ್ಲಿ ಅನುಭವ ಹೊಂದಿದ ಗೈಡ್‌ಗಳೊಂದಿಗೆ ಮಾತ್ರ ಪ್ರವೇಶ ಮತ್ತು ನಿರ್ದಿಷ್ಟ ಸಂಖ್ಯೆಗೆ ಮಾತ್ರ ಅನುಮತಿ ನೀಡಲು ಉದ್ದೇಶಿಸಲಾಗಿದೆ. ಆನ್‌ಲೈನ್ ಅಥವಾ ಸ್ಥಳದಲ್ಲೇ ಬುಕ್ಕಿಂಗ್ ವ್ಯವಸ್ಥೆ ಜಾರಿಗೊಳಿಸುವ ಬಗ್ಗೆಯೂ ಚಿಂತಿಸಲಾಗಿದೆ.

ರಾಜ್ಯದ ಇತರೆ ಜಿಲ್ಲೆಗಳಲ್ಲಿ ಈಗಾಗಲೇ ಯಶಸ್ವಿಯಾಗಿ ಜಾರಿಗೆ ಬಂದಿರುವ ಟ್ರೆಕ್ಕಿಂಗ್ ಮಾರ್ಗಸೂಚಿಗಳನ್ನು ಹಾಸನದಲ್ಲೂ ಅನ್ವಯಿಸಲು ನಿರ್ಧರಿಸಲಾಗಿದೆ. ವಿಶೇಷವಾಗಿ ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳ ಮಾದರಿ ಇಲ್ಲಿ ಅನುಸರಿಸುವ ಸಾಧ್ಯತೆ ಇದೆ. ಈ ಜಿಲ್ಲೆಗಳಲ್ಲಿ ನಿಯಂತ್ರಿತ ಟ್ರೆಕ್ಕಿಂಗ್ ವ್ಯವಸ್ಥೆಯಿಂದ ಪರಿಸರ ಸಂರಕ್ಷಣೆ ಜೊತೆಗೆ ಪ್ರವಾಸೋದ್ಯಮವೂ ಅಭಿವೃದ್ಧಿಯಾಗಿದೆ.

» ನಾಲ್ಕನೇ ಪುಟದಲ್ಲಿ

## ಹೆತ್ತೂರಿನ ಅಣ್ಣಯ್ಯಗೆ ಅಂಬೇಡ್ಕರ್ ಪ್ರಶಸ್ತಿ

**ಬೆಂಗಳೂರು:** ಕರ್ನಾಟಕ ಸರ್ಕಾರದ ವತಿಯಿಂದ ನೀಡುವ ಡಾ. ಬಿ.ಆರ್.ಅಂಬೇಡ್ಕರ್ ಪ್ರಶಸ್ತಿಗೆ ಐವರು ಸಾಧಕರು ಆಯ್ಕೆಯಾಗಿದ್ದಾರೆ.

ಬೆಂಗಳೂರು ಕೇಂದ್ರ ವಿಭಾಗದಿಂದ ಹೋರಾಟ/ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ರಾಜರಾಜೇಶ್ವರಿ ನಗರದ ಮಂಗ್ಳೂರು ವಿಜಯ್, ಬೆಂಗಳೂರು ವಿಭಾಗದಿಂದ ಪತ್ರಿಕೋದ್ಯಮದ ಸಾಧನೆ ಗಾಗಿ ಕೋಲಾರ ಮೂಲದ ಸಂಚಿಕೆ ದಿನಪತ್ರಿಕೆಯ ಸಿ.ಎಂ.ಮುನಿಯಪ್ಪ ಅವರಿಗೆ ಪ್ರಶಸ್ತಿ ಲಭಿಸಿದೆ. ಮೈಸೂರು ವಿಭಾಗದಿಂದ ಹೋರಾಟ ಕ್ಷೇತ್ರದಲ್ಲಿನ ಸಾಧನೆಗಾಗಿ ಸಕಲೇಶಪುರದ ಹೆತ್ತೂರಿನ ಹೆಚ್.ಎನ್.ಅಣ್ಣಯ್ಯ ಅವರಿಗೆ, ಕಲಬುರಗಿ ವಿಭಾಗದಿಂದ ಸಾಹಿತ್ಯ/ಸಂಘಟನೆಯಲ್ಲಿನ ಸಾಧನೆಗಾಗಿ ಅಫಜಲಪುರದ ಹನುಮಂತರಾವ್ ದೊಡ್ಡಮನಿ ಅವರಿಗೆ ಪ್ರಶಸ್ತಿ ಲಭಿಸಿದೆ. ಬೆಳಗಾವಿ ವಿಭಾಗದಿಂದ ದೇವದಾಸಿ ವಿಮುಕ್ತಿ ಮಾಡಿದ ಸಾಧನೆಗಾಗಿ ಅಮ್ಮ ಫೌಂಡೇಷನ್‌ನ ಕಾರ್ಯದರ್ಶಿ ಶೋಭಾ ಗಸ್ತಿ ಅವರಿಗೆ ಅಂಬೇಡ್ಕರ್ ಪ್ರಶಸ್ತಿ ಲಭಿಸಿದೆ. ಪ್ರಶಸ್ತಿಯು 5 ಲಕ್ಷ ರೂ. ನಗದು ಪುರಸ್ಕಾರ, 20 ಗ್ರಾಂ ಚಿನ್ನ ಹಾಗು ಪ್ರಶಸ್ತಿ ಫಲಕ ಒಳಗೊಂಡಿರುತ್ತದೆ. ಏ.14 ರಂದು ಬೆಂಗಳೂರಿನಲ್ಲಿ ನಡೆ ಯುವ ಅಂಬೇಡ್ಕರ್ ಜನ್ಮದಿನಾಚರಣೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

## ತಿರುಪತಿ ಗ್ರಾಮ ಸಮೀಪ ಚೆಕ್ ಡ್ಯಾಂ ಕಾಮಗಾರಿಗೆ ಚಾಲನೆ

• ಪ್ರಜೋದಯ ವರದಿ



**ಅರಸೀಕೆರೆ:** ಸಣ್ಣ ನೀರಾವರಿ ಇಲಾಖೆಯ ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಯಡಿ 1 ಕೋಟಿ ರೂ. ವೆಚ್ಚದಲ್ಲಿ 2 ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಶನಿವಾರ ತಿರುಪತಿ ಗ್ರಾಮದ ಬಳಿ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು, ನಾನು ಶಾಸಕನಾಗುವುದಕ್ಕಿಂತ ಮೊದಲು ಅರಸೀಕೆರೆ ಕ್ಷೇತ್ರ ಬಯಲು ಸೀಮೆ, ಬರಪೀಡಿತ ಪ್ರದೇಶ ಎಂಬ ಹಣೆಪಟ್ಟಿ ಪಡೆದಿತ್ತು. ಅಂತರ್ಜಲ ಮಟ್ಟ ಸಾವಿರಾರು ಅಡಿಗೆ ಇಳಿದಿತ್ತು. ಅದನ್ನು ಮನಗಂಡು ಸದನದಲ್ಲಿ ಹೋರಾಟ ಮಾಡಿ ಅಂತ ರ್ಜಲ ಅಭಿವೃದ್ಧಿ ಆಗಬೇಕಾದರೆ ಚೆಕ್ ಡ್ಯಾಂಗಳನ್ನ ನಿರ್ಮಾಣ ಮಾಡಬೇಕೆಂದು ಸರ್ಕಾರಗಳಿಗೆ ಒತ್ತಾಯ ಮಾಡಿ ಅನುದಾನ ತಂದಿದ್ದೇನೆ ಎಂದರು.

ಅದರ ಪರಿಣಾಮ ಕ್ಷೇತ್ರದಲ್ಲಿ ನೂರಾರು ಚೆಕ್ ಡ್ಯಾಂಗಳು ನಿರ್ಮಾಣವಾದವು. ಇಂದು ನಾವು ಅಂತರ್ಜಲ ಶೇಖರಣೆಯಲ್ಲಿ ಮುಂದಿದ್ದೇವೆ. ಕೇವಲ 200 ರಿಂದ 300 ಅಡಿಗೆ ನೀರು ದೊರೆಯುತ್ತಿದೆ. ಅದರಿಂದ ರೈತರಿಗೆ ಸಾಕಷ್ಟು ಅನು ಕೂಲವಾಗಿದೆ. ಇಂತಹ ಯೋಜನೆ ಗಳನ್ನು ಮತ್ತಷ್ಟು ಮುಂದುವರಿಸಲಾಗುವುದು. ತಾಲ್ಲೂಕಿನಲ್ಲಿ ಇನ್ನಷ್ಟು ಚೆಕ್ ಡ್ಯಾಂ ನಿರ್ಮಾಣಕ್ಕೆ ಒತ್ತು ನೀಡಲಾಗುವುದೆಂದು ತಿಳಿಸಿದರು.


ಅಗ್ಗುಂದ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ತಿರುಪತಿ ಗಿರೀಶ, ಮುಖಂಡರಾದ ತಿರುಪತಿ ಚಂದ್ರಣ್ಣ, ರಂಗಸ್ವಾಮಿ, ಕಾರೇ ಹಳ್ಳಿ ಈಶಣ್ಣ, ಬೊಮ್ಮೇನಹಳ್ಳಿ ವಡ್ಡರ ಹಟ್ಟಿ ರೇವಣ್ಣ, ಗೊಲ್ಲರಹಟ್ಟಿ ರಾಜಶೇಖರ, ಬೋರನಕೊಪ್ಪಲು ಶಿವಲಿಂಗಪ್ಪ, ಯಳವಾರೆ ಕೇಶವಣ್ಣ, ಇಂಜಿನೀಯರ್ ಉಮೇಶ, ಗುತ್ತಿಗೆದಾರ ಜ್ಞಾನೇಶ ಹಾಗು ಗ್ರಾಮಸ್ಥರು ಹಾಜರಿದ್ದರು.

## ಲಾರಿಗೆ ಸಾರಿಗೆ ಬಸ್ ಡಿಕ್ಕಿ: ಚಾಲಕ ಸಾವು

• ಪ್ರಜೋದಯ ವರದಿ







**ಚನ್ನರಾಯಪಟ್ಟಣ:** ನಿರ್ಲಕ್ಷ್ಯದ ಚಾಲನೆಯಿಂದ ಕೆಎಸ್ ಆರ್‌ಟಿಸಿ ಬಸ್ ಮುಂದೆ ಹೊರಟಿದ್ದ ಲಾರಿಗೆ ಡಿಕ್ಕಿಯಾಗಿ ಚಾಲಕ ಮೃತಪಟ್ಟು ಇಪತ್ತಕ್ಕೂ ಹೆಚ್ಚು ಜನರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ದಂಡಿಗನಹಳ್ಳಿ ಸಮೀಪ ಶನಿವಾರ ಬೆಳಿಗ್ಗೆ ನಡೆದಿದೆ.

ಬಸ್ ಚಾಲಕ ಆನಂದ್ (46) ಮೃತರು. ಪ್ರಯಾಣಿಕರಾದ ಮಂಜುನಾಥ್, ಸೋಮಶೇಖರ್, ಕೀರ್ತನಾ, ಬೋರಮ್ಮ, ಅಂಕಿತಾ, ಚೇತನ್, ರವಿಕುಮಾರ್, ರಾಜಶೇಖರ್, ಕಲಾವತಿ ಮತ್ತು ಅಬೂಬ್‌ಕರ್ ಸೇರಿ ಇತರರು ಗಾಯಗೊಂಡಿದ್ದಾರೆ. ಈ ಪೈಕಿ ಏಳು ಜನರಿಗೆ ಗಂಭೀರ ಗಾಯಗಳಾಗಿವೆ ಎಂದು ತಿಳಿದುಬಂದಿದೆ. ಚಿಂತಾಜನಕ ಸ್ಥಿತಿಯಲ್ಲಿರುವ ಮೂವರಿಗೆ ಹಾಸನದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಸಣ್ಣಪುಟ್ಟ ಗಾಯಗಳಿಂದ ಬಳಲುತ್ತಿರುವವರು ಹಿಮ್ಸ್‌ಗೆ ದಾಖಲಾಗಿದ್ದಾರೆ.

ಬೆಳಿಗ್ಗೆ 4 ಗಂಟೆ ಸಮಯದಲ್ಲಿ ಅಪಘಾತ ಸಂಭವಿಸಿದೆ. ಮುಂದೆ ಹೊರಟಿದ್ದ ಲಾರಿಯನ್ನು ಓವರ್‌ಟೇಕ್ ಮಾಡಲು ಬಸ್ ಚಾಲಕ ಹಿಂದಿನಿಂದ ಜೋರಾಗಿ ಬಂದಿದ್ದಾರೆ. ನಿದ್ರೆ ಮಂಪರಿನಲ್ಲಿ ಲಾರಿಗೆ ಡಿಕ್ಕಿ ಮಾಡಿದ್ದಾರೆ ಎನ್ನಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಫುಡ್ ಕೋರ್ಟ್‌ನಲ್ಲಿ ಮುಚ್ಚಿದ ಮಳಿಗೆಗೆ ಸಿಲಿಂಡರ್ ನೆರವು

• ಪ್ರಜೋದಯ ವರದಿ

**ಹಾಸನ:** ಇರಾನ್-ಇಸ್ರೇಲ್ ಯುದ್ಧದಿಂದ ವಾಣಿಜ್ಯ ಬಳಕೆ ಸಿಲಿಂಡರ್ ಕೊರತೆಯಿಂದ ಸ್ಥಗಿತಗೊಂಡಿದ್ದ ಫುಡ್ ಕೋರ್ಟ್, ಸಣ್ಣಪುಟ್ಟ ಹೋಟೆಲ್‌ಗಳಿಗೆ ಆಹಾರ ಇಲಾಖೆ ಹಾಗು ಹೆಚ್‌ಪಿ ಗ್ಯಾಸ್ ಕಂಪನಿ ಸಿಲಿಂಡರ್‌ಗಳನ್ನು ನೀಡುವ ಮೂಲಕ ನೆರವಾಗಿದೆ.

ಸಿಲಿಂಡರ್‌ಗಳ ಕೊರತೆಯಿಂದ ನಗರದ ಎಂ.ಜಿ.ರಸ್ತೆಯಲ್ಲಿರುವ ಭಗತ್‌ಸಿಂಗ್ ಫುಡ್‌ಕೋರ್ಟ್‌ನಲ್ಲಿರುವ ಬಹುತೇಕ ಚಿಕ್ಕ ಹೋಟೆಲ್‌ಗಳು ಬಂದ್ ಆಗಿದ್ದವು. ಕೆಲವು ಹೋಟೆಲ್‌ಗಳಲ್ಲಿ ವಾಣಿಜ್ಯ ಬಳಕೆ ಸಿಲಿಂಡರ್ ಬದಲಿಗೆ ಗೃಹಬಳಕೆ ಸಿಲಿಂಡರ್ ಬಳಸುತ್ತಿದ್ದು ಅಂತಹ ಹೋಟೆಲ್‌ಗಳ ಮೇಲೆ ಆಹಾರ ಇಲಾಖೆ ಅಧಿಕಾರಿಗಳು ದಾಳಿ ಮಾಡಿ ಸಿಲಿಂಡರ್ ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದರು. ಅದರಿಂದಾಗಿ ಸಣ್ಣ ಹೋಟೆಲ್ ಮಾಲೀಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರು. ಅದನ್ನು ಮನಗೊಂಡ ಆಹಾರ ಇಲಾಖೆ ಹಾಗು ಹೆಚ್.ಪಿ.ಗ್ಯಾಸ್ ಕಂಪನಿ ಸಣ್ಣ ಹೋಟೆಲ್‌ಗಳ ನೆರವಿಗೆ ಧಾವಿಸಿದ್ದಾರೆ.





ಹೆಚ್‌ಪಿ ಕಂಪನಿಗೆ 5 ಕೆಜಿ ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆ ಮಾಡುವಂತೆ ಆಹಾರ ಇಲಾಖೆ ಅಧಿಕಾರಿಗಳ ಸೂಚನೆ ಮೇರೆಗೆ ಫುಡ್ ಕೋರ್ಟ್‌ನಲ್ಲಿ ಬಾಗಿಲು ಮುಚ್ಚಿದ್ದ ಹೋಟೆಲ್‌ಗಳಿಗೆ ಐದು ಕೆಜಿ ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನು ವಿತರಣೆ ಮಾಡಲಾಯಿತು.

ಹಾಸನ್ ಗ್ಯಾಸ್ ಸಪ್ಲೈ ವತಿಯಿಂದ 613 ರೂ. ಗೆ ಐದು ಕೆಜಿ ವಾಣಿಜ್ಯ ಬಳಕೆ ಸಿಲಿಂಡರ್‌ನ್ನು ಆಹಾರ ಇಲಾಖೆ ಅಧಿಕಾರಿಗಳು ವಿತರಿಸಿದರು. ಗ್ಯಾಸ್ ಖಾಲಿಯಾದ ಕೂಡಲೇ ಬುಕ್ ಮಾಡಿದರೆ ಮತ್ತೆ ಸಿಲಿಂಡರ್ ವಿತರಿಸುವುದಾಗಿ ಹೆಚ್‌ಪಿ ಕಂಪನಿ ಅಧಿಕಾರಿಗಳು ತಿಳಿಸಿದ್ದಾರೆ. ಐದು ಕೆಜಿ ಸಿಲಿಂಡರ್ ಸಿಕ್ಕಿದ್ದರಿಂದ ಫುಡ್ ಕೋರ್ಟ್‌ನ ಸಣ್ಣ ವ್ಯಾಪಾರಿಗಳು ನಿಟ್ಟುಸಿರು ಬಿಟ್ಟಿದ್ದು ಆಹಾರ ಇಲಾಖೆ ಹಾಗು ಹೆಚ್‌ಪಿ ಗ್ಯಾಸ್ ಕಂಪನಿಗೆ ಧನ್ಯವಾದ ಹೇಳಿದ್ದಾರೆ.

### ನೀರಿಲ್ಲದೆ ಜಮೀನು ಪಾಳು ಬಿಟ್ಟ ರೈತರು | ಹಲವು ಬಾರಿ ಮನವಿ ಸಲ್ಲಿಸಿದರೂ ವ್ಯರ್ಥ

## ಚುಂಗನಹಳ್ಳಿ ಚೆಕ್ ಡ್ಯಾಂ ದುರಸ್ತಿ ಭರವಸೆ ಹುಸಿ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಬೇಲೂರು ತಾಲ್ಲೂಕಿನ ಚುಂಗನಹಳ್ಳಿ ಗ್ರಾಮ ಸಮೀಪ ನಿರ್ಮಿಸಿರುವ ಚೆಕ್ ಡ್ಯಾಂನ ಒಂದು ಭಾಗ ಒಡೆದು ನೀರು ಜಮೀನುಗಳಿಗೆ ತಲುಪದೆ ಬೆಳೆ ಬೆಳೆಯಲಾಗದೆ ಅನ್ನದಾತರು ಕಂಗಾಲಾಗಿದ್ದಾರೆ.

ಚೀಕನಹಳ್ಳಿ ಗ್ರಾಮದಿಂದ ಹರಿಯುವ ಚಿಕ್ಕಹಳ್ಳ ನೀರಿಗೆ ಅಡ್ಡಲಾಗಿ ಚುಂಗನಹಳ್ಳಿ ಸಮೀಪ ದಶಕಗಳ ಹಿಂದೆ ನಿರ್ಮಿಸಿದ್ದ ಚೆಕ್ ಡ್ಯಾಂ ಶಿಥಿಲಾವಸ್ಥೆ ತಲುಪಿದೆ. ನಾಲ್ಕೈದು ವರ್ಷಗಳ ಹಿಂದೆ ಚೆಕ್ ಡ್ಯಾಂನ ಒಂದು ಭಾಗ ಒಡೆದು ಹೋಗಿದ್ದು ದುರಸ್ತಿಯಾಗದ ಪರಿಣಾಮ, ನೂರಾರು ಎಕರೆ ಭತ್ತದ ಗದ್ದೆಗಳು ನೀರಾವರಿ ಸೌಲಭ್ಯ ಇಲ್ಲದೆ ಪಾಳು ಬಿದ್ದಿವೆ. ಮತ್ತೊಂದೆಡೆ ನೀರು ವ್ಯರ್ಥವಾಗಿ ಹರಿಯುತ್ತಿರುವುದು ನಷ್ಟಕ್ಕೆ ಎಡೆಮಾಡಿಕೊಟ್ಟಿದೆ. ಚೆಕ್ ಡ್ಯಾಂ ದುರಸ್ತಿ ಮಾಡಿ ಕಾಲುವೆಯಲ್ಲಿ ಸರಾಗವಾಗಿ ನೀರು ಹರಿಯಲು ಹೂಳು ತೆಗೆಯುವಂತೆ ಜನಪ್ರತಿನಿಧಿಗಳು ಹಾಗು ಅಧಿಕಾರಿಗಳನ್ನು ಗ್ರಾಮಸ್ಥರು ಹಲವು ಬಾರಿ ಭೇಟಿ ಮಾಡಿ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ.



ಚುಂಗನಹಳ್ಳಿ ಬಳಿ ನಿರ್ಮಿಸಿರುವ ಚೆಕ್ ಡ್ಯಾಂನಿಂದ ಹರಿಯುವ ನೀರು ಸುತ್ತಮುತ್ತಲಿನ ರೈತರ ಜೀವನಾಧಾರವಾಗಿದೆ. ಭತ್ತ ಸೇರಿ ವಿವಿಧ ಬೆಳೆಗಳನ್ನು ಬೆಳೆದು ರೈತರು ಆರ್ಥಿಕವಾಗಿ ಲಾಭಗಳಿಸಿ ಜೀವನ ನಡೆಸುತ್ತಿದ್ದರು. ನೀರಾವರಿ ಸೌಲಭ್ಯದಿಂದ ಗ್ರಾಮದಲ್ಲಿ ಕೃಷಿ ಚಟುವಟಿಕೆಗಳು ಚುರುಕುಗೊಂಡಿದ್ದವು. ಆದರೆ ಚೆಕ್ ಡ್ಯಾಂ ಒಡೆದು ಹೋದ ನಂತರ ನಾಲೆಗೆ ಹರಿ ಯುತ್ತಿದ್ದ ನೀರು ಸಂಪೂರ್ಣವಾಗಿ ನಿಂತು ಹೋಗಿ, ಕೃಷಿ ಚಟುವಟಿಕೆಗಳಿಗೆ ಭಾರೀ ಹೊಡೆತ ಬಿದ್ದಿದೆ. ನೀರಿನ ಕೊರತೆಯಿಂದ ಅನೇಕ ರೈತರು ಭತ್ತ ಬೆಳೆಯುವುದನ್ನೇ ನಿಲ್ಲಿಸಿದ್ದಾರೆ. ಕೆಲವರು ಅಡಿಕೆ, ಕಾಫಿ ಮುಂತಾದ ಪರ್ಯಾಯ ಬೆಳೆಗಳನ್ನು ಬೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಈ ಪರ್ಯಾಯ ಬೆಳೆಗಳಿಗೂ ನೀರು ಅಗತ್ಯ ಇರುವುದರಿಂದ ತೀವ್ರ ಸಂಕಷ್ಟ ಎದುರಾಗಿದೆ.

### ಗಿಡಗಂಟಿಗಳಿಂದ ತುಂಬಿದ ನಾಲೆ

ಚೆಕ್ ಡ್ಯಾಂ ನೀರು ಹರಿಯಲು ನಿರ್ಮಿಸಿದ್ದ ಕಾಲುವೆ ಈಗ ಗಿಡಗಂಟಿಗಳಿಂದ ತುಂಬಿದ್ದು ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡಿದೆ. ಆರಂಭದ ಕೆಲವು ವರ್ಷಗಳು ಮಾತ್ರ ಚೆನ್ನಾಗಿ ನೀರು ದೊರೆಯಿತು. ಆ ಬಳಿಕ ಅಧಿಕಾರಿಗಳ ನಿರ್ಲಕ್ಷ್ಯಂದಿ ಕಾಲುವೆಗಳ ಸ್ವಚ್ಛತಾ ಕಾರ್ಯ ನಡೆಯಲೇ ಇಲ್ಲ. ಚೆಕ್ ಡ್ಯಾಂ ದುರಸ್ತಿಯಾದರೆ ಉಳಿದ ಕೆಲಸಗಳು ತಾನಾಗಿಯೇ ಆಗುತ್ತವೆ. ಸಂಬಂಧಪಟ್ಟವರು ಆ ನಿಟ್ಟಿನಲ್ಲಿ ಯೋಚಿಸಬೇಕಿದೆ ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.


**ದುಡ್ಡು ಕೊಟ್ಟು ಅಕ್ಕಿ ಖರೀದಿ**

ಈ ಹಿಂದೆ ಚೆಕ್ ಡ್ಯಾಂ ನೀರು ಬಳಸಿಕೊಂಡು ರೈತರು ಭತ್ತ ಬೆಳೆಯುತ್ತಿದ್ದ ಕಾರಣ ವರ್ಷ ವಿಡೀ ಊಟಕ್ಕೆ ಭತ್ತ ಲಭ್ಯವಾಗುತ್ತಿತ್ತು. ಆದರೆ ಚೆಕ್ ಡ್ಯಾಂ ಒಡೆದ ಬಳಿಕ ನೀರಿನ ಕೊರತೆಯಿಂದ ರೈತರು ಭತ್ತ ಬೆಳೆಯುವುದನ್ನೇ ನಿಲ್ಲಿಸುವುದರಿಂದ ಸದ್ಯ ದುಡ್ಡು ಕೊಟ್ಟು ಅಕ್ಕಿ ಖರೀದಿಸುವ ಪರಿಸ್ಥಿತಿ ಎದುರಾಗಿದೆ. ಈ ಬಗ್ಗೆ ಗ್ರಾಮಸ್ಥರು ಹಾಗು ರೈತರು ಹಲವು ಬಾರಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಮತ್ತು ಕ್ಷೇತ್ರ ಶಾಸಕ ಹೆಚ್.ಕೆ.ಸುರೇಶ್ ಅವರಿಗೆ ಮನವಿ ಸಲ್ಲಿಸಿದ್ದಾರೆ. ಆದರೆ ಶಾಸಕರಿಂದ ದುರಸ್ತಿಯ ಭರವಸೆ ದೊರೆತಿದೆ ಹೊರತು ಈ ವರೆಗೆ ಯಾವುದೇ ಪ್ರಯೋ ಜನವಾಗಿಲ್ಲ. ದುರಸ್ತಿ ಕಾರ್ಯ ವಿಳಂಬವಾಗುತ್ತಿರುವುದರಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಚೆಕ್ ಡ್ಯಾಂ ದುರಸ್ತಿಯಿಂದ ಭತ್ತ ಬೆಳೆಯುವುದನ್ನೇ ನಿಲ್ಲಿಸಿ ಗದ್ದೆಗಳನ್ನು ಪಾಳು ಬಿಟ್ಟಿದ್ದು, ಗದ್ದೆ ಬಿಟ್ಟರೆ ಬೇರೆ ಭೂಮಿಯಿಲ್ಲ. ಕೂಡಲೇ ಚೆಕ್ ಡ್ಯಾಂ ದುರಸ್ತಿಪಡಿಸಿ ಅನುಕೂಲ ಮಾಡಿಕೊಡಬೇಕು ಹಾಗು ಕಿರು ನಾಲೆಯಲ್ಲಿ ಹೂಳು ತೆಗೆದು ಸ್ವಚ್ಛ ಮಾಡಿಕೊಡಬೇಕೆಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ.

CMYK CMYK CMYK CMYK

# ಮಧ್ಯಮ ವರ್ಗದ ಜನ ಉಳಿತಾಯ ಮಾಡುತ್ತಿಲ್ಲವೇ?

**ಟ್ರಾವೆಲ್, ಬ್ರ್ಯಾಂಡ್ ಎಕ್ಸ್‌ಪೀರಿಯನ್ಸ್, ಟೆಕ್ನಾಲಜಿ, ಈಸೀ ಕ್ರೆಡಿಟ್, ಡಿಜಿಟಲ್ ಪೇಮೆಂಟ್ಸ್, ಆನ್ಲೈನ್ ಶಾಪಿಂಗ್, ಕ್ರೆಡಿಟ್ ಕಾರ್ಡ್ ಲೋನ್ಸ್, ಎಲ್ಲವೂ ಸರ್ವೇ ಸಾಮಾನ್ಯ. ಹಲವಾರು ದಶಕಗಳ ಕಾಲ ಭಾರತೀಯ ಕುಟುಂಬಗಳು ಉಳಿತಾಯಕ್ಕೆ ಹೆಸರುವಾಸಿಯಾಗಿದ್ದವು. ಅವರ ಆದಾಯದಲ್ಲಿ ದೊಡ್ಡ ಪಾಲು ಉಳಿತಾಯಕ್ಕೆ ಸಂದಾಯವಾಗುತ್ತಿತ್ತು. ಆದರೆ ಉಳಿತಾಯದ ಅಭ್ಯಾಸ ಕಡಿಮೆಯಾಗುತ್ತಿದೆ ಎಂಬ ಮಾತಿದೆ.**




ಮನಿ ಮೈಂಡೆಡ್ ಭಾರತದಲ್ಲಿ ತೊಂಭತ್ತರ ದಶಕದಲ್ಲಿ ಮಧ್ಯಮ ವರ್ಗದ ಜನರ ಜೀವನ ಹೇಗೆ ಇತ್ತು? ಆಗ ಜನರ ಆದಾಯ ಕಡಿಮೆ ಇದ್ದರೂ, ಖರ್ಚು ಕೂಡ ಕಡಿಮೆ ಇತ್ತು. ಒಂದು ಸ್ವಂತ ಮನೆ, ಮಕ್ಕಳ ಶಿಕ್ಷಣಕ್ಕೆ ಉಳಿತಾಯ, ಸಾಲ ಮುಕ್ತ ನಿವೃತ್ತಿ ಜೀವನ, ಮಕ್ಕಳ ಮದುವೆ, ಒಂದಷ್ಟು ಚಿನ್ನ, ಫಿಕ್ಸೆಡ್ ಡೆಪಾಸಿಟ್, ಸಾಧ್ಯವಾದರೆ ಒಂದು ಸಣ್ಣ ಜಾಗ ಖರೀದಿ ಇಷ್ಟೇ ಪರಿಪೂರ್ಣ, ಸಂತೃಪ್ತ ಬದುಕಿನ ರಹದಾರಿಯಾಗಿತ್ತು.

ಮನೆಗೊಂದು ಟಿವಿ, ವರ್ಷಕ್ಕೊಮ್ಮೆ ಪ್ರವಾಸ, ಯಾವುದಾದರೂ ಒಂದು ಆದಾಯದ ಮೂಲ ಇರುತ್ತಿತ್ತು. ಅಷ್ಟಕ್ಕೇ ಮಧ್ಯಮ ವರ್ಗದ ಜನ ಖುಷಿಯಿಂದ ಕಾಲಕಳೆಯುತ್ತಿದ್ದರು. ಆಗಲೂ ಸಂಪತ್ತಿನ ಅಸಮಾನ ಹಂಚಿಕೆ ಇತ್ತು. ಬಹುಪಾಲು ಮಂದಿ ಇರುವುದರಲ್ಲಿಯೇ ತೃಪ್ತಿಪಡುತ್ತಿದ್ದರು.

ಆದರೆ ಈಗ ಹಾಗಲ್ಲ. 2020ರ ವೇಳೆಗೆ ಚಿತ್ರಣ ಸಂಪೂರ್ಣ ಬದಲಾಗಿದೆ. ಮನೆಗೆ ಹಲವಾರು ಸೌಕರ್ಯಗಳು, ಯಂತ್ರೋಪಕರಣಗಳು ಬೇಕೇಬೇಕು. ಬಂಗಾರದ ಹಲವಾರು ಸರಗಳು, ಕೈಯಲ್ಲಿ ದುಬಾರಿ ಸ್ಮಾರ್ಟ್‌ಫೋನ್ ಅತಿ ಅವಶ್ಯಕ ಎನ್ನಿಸಿವೆ. ದೊಡ್ಡ ಕಾರು ಮನೆ ಮುಂದಿರಬೇಕು.

ಟ್ರಾವೆಲ್, ಬ್ರ್ಯಾಂಡ್ ಎಕ್ಸ್‌ಪೀರಿಯನ್ಸ್, ಟೆಕ್ನಾಲಜಿ, ಈಸೀ ಕ್ರೆಡಿಟ್, ಡಿಜಿಟಲ್ ಪೇಮೆಂಟ್ಸ್, ಆನ್ಲೈನ್ ಶಾಪಿಂಗ್, ಕ್ರೆಡಿಟ್ ಕಾರ್ಡ್ ಲೋನ್ಸ್, ಎಲ್ಲವೂ ಸರ್ವೇ ಸಾಮಾನ್ಯ. ಹಲವಾರು ದಶಕಗಳ ಕಾಲ ಭಾರತೀಯ ಕುಟುಂಬಗಳು ಉಳಿತಾಯಕ್ಕೆ ಹೆಸರುವಾಸಿಯಾಗಿದ್ದವು. ಅವರ ಆದಾಯದಲ್ಲಿ ದೊಡ್ಡ ಪಾಲು ಉಳಿತಾಯಕ್ಕೆ ಸಂದಾಯವಾಗುತ್ತಿತ್ತು. ಆದರೆ ಉಳಿತಾಯದ ಅಭ್ಯಾಸ ಕಡಿಮೆಯಾಗುತ್ತಿದೆ ಎಂಬ ಮಾತಿದೆ.

ದೇಶೀಯ ಉಳಿತಾಯದ ದರ ಕಡಿಮೆಯಾಗಿರುವುದನ್ನು ಅಂಕಿ ಅಂಶಗಳು ಬಿಂಬಿಸಿರುವುದೂ ಇದಕ್ಕೆ ಕಾರಣ. ಕಳೆದ 47 ವರ್ಷಗಳಲ್ಲಿಯೇ 2023-24ರಲ್ಲಿ ಉಳಿತಾಯದ ದರ ಕಡಿಮೆಯಾಗಿತ್ತು ಎಂಬ ವರದಿಗಳಿವೆ. ಇದೇ ಸಂದರ್ಭ ಜನರು ಹೆಚ್ಚೆಚ್ಚು ಸಾಲವನ್ನು ಪಡೆಯುತ್ತಿದ್ದಾರೆ. ಲೈಫ್ ಸ್ಟೈಲ್ ಮೇಲ್ದರ್ಜೆಗೇರಿದೆ. ಸಾಲದ ಮೇಲಿನ ಅವಲಂಬನೆಯೂ ಹೆಚ್ಚುತ್ತಿದೆ.

ಹಳೆಯ ಪೀಳಿಗೆಯವರು ಅಂಚೆ ಉಳಿತಾಯ ಯೋಜನೆಗಳು, ಬ್ಯಾಂಕ್‌ನ ನಿಶ್ಚಿತ ಠೇವಣಿಗಳು, ರಿಕರಿಂಗ್ ಡೆಪಾಸಿಟ್, ಚಿನ್ನ ಮತ್ತು ಭೂಮಿಯಲ್ಲಿ ಹೂಡಿಕೆ ಮಾಡುತ್ತಿದ್ದರು. ಆದರೆ ಈಗಿನ ಯುವ ಜನತೆ ಮ್ಯೂಚುವಲ್ ಫಂಡ್, ಮ್ಯೂಚುವಲ್ ಪಂಡ್ ಸಿಪ್, ಇಟಿಎಫ್, ಸ್ಟಾಕ್ಸ್, ಬಾಂಡ್, ಕ್ರಿಪ್ಟೋ ಕರೆನ್ಸಿಗಳಲ್ಲಿ ಹೂಡಿಕೆ ಮಾಡುತ್ತಾರೆ. ಗ್ರೋ, ಜೆರೋಧಾ ಮೊದಲಾದ ಅಪ್ಲಿಕೇಷ ಮೂಲಕ ಸುಲಭವಾಗಿ ಹೂಡಿಕೆ ಮಾಡಬಹುದು. ಡಿಜಿಟಲ್ ಟೂಲ್ಸ್‌ಗಳ ಬಗ್ಗೆ ಜನ ಒಲವನ್ನು ಹೊಂದಿದ್ದಾರೆ. ಅದು ಅನುಕೂಲಕರವೂ ಆಗಿದೆ.

ಹಾಗಾದರೆ ದೇಶೀಯ ಉಳಿತಾಯದ ಪ್ರಮಾಣ 47 ವರ್ಷದಲ್ಲಿಯೇ ಕೆಳಮಟ್ಟಕ್ಕೆ ಇಳಿದಿದ್ದೇಕೆ? ತಜ್ಞರ ಪ್ರಕಾರ ಖರ್ಚು ವೆಚ್ಚಗಳು ಜಾಸ್ತಿಯಾಗಿರುವುದು, ಸಾಲ ಸೋಲ ಮಾಡುವುದು ಇದಕ್ಕೆ ಕಾರಣ. ಕಡಿಮೆ ಉಳಿಸಿ, ಹೆಚ್ಚು ಸಾಲ ತೆಗೆದುಕೊಳ್ಳಿ ಎನ್ನುವುದು ಈಗಿನ ನೀತಿಯಾಗಿದೆ.

ಇದರಿಂದ ವೈಯಕ್ತಿಕ ಹಣಕಾಸು ಮೇಲೆ ತೀವ್ರ ಒತ್ತಡ ಸೃಷ್ಟಿಯಾಗುತ್ತಿದೆ. ಮಾರುಕಟ್ಟೆ ಸಂಶೋಧನಾ ವರದಿಗಳ ಪ್ರಕಾರ 44 ಪರ್ಸೆಂಟ್ ಭಾರತೀಯ ಕುಟುಂಬಗಳು ಈಗಲೂ ಕಡಿಮೆ ಬಡ್ಡಿ ದರ ನೀಡುವ ಬ್ಯಾಂಕ್ ಡೆಪಾಸಿಟ್‌ಗಳಲ್ಲಿ ಹೂಡಿಕೆ ಮಾಡುತ್ತಾರೆ. ಇದು ಸುರಕ್ಷತೆ ಮತ್ತು ಖಾತರಿಯ ಆದಾಯ ನೀಡುತ್ತದೆಯಾದರೂ, ಇಲ್ಲಿ ಬೆಳವಣಿಗೆ ಕಡಿಮೆ.

ಹಣದುಬ್ಬರದ ಎದುರು ಸಂಪತ್ತಿನ ಮೌಲ್ಯ ರಕ್ಷಣೆಗೆ ಕಷ್ಟಕರವಾಗುತ್ತದೆ. ಎಷ್ಟೋ ಸಲ ಹಣದುಬ್ಬರ ಕಳೆದಾಗ ಸಿಗುವ ಮೊತ್ತ ಅತ್ಯಲ್ಪ. ಹೀಗಾಗಿ ಖರೀದಿಸುವ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ಹೀಗಾಗಿಯೇ ಮಧ್ಯಮ ವರ್ಗದ ಜನರು ಇತ್ತೀಚಿನ ವರ್ಷಗಳಲ್ಲಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಾರೆ.

2022-23ರಲ್ಲಿ ದೇಶೀಯ ಉಳಿತಾಯದ ಪ್ರಮಾಣವು ಜಿಡಿಪಿಯ 5.1 ಪರ್ಸೆಂಟ್‌ಗೆ ಇಳಿದಿತ್ತು. ಕುಟುಂಬಗಳು ಬ್ಯಾಂಕ್ ಠೇವಣಿಗಿಂತ ರಿಯಲ್ ಎಸ್ಟೇಟ್, ಚಿನ್ನ, ಮ್ಯೂಚುವಲ್ ಫಂಡ್, ಸ್ಟಾಕ್ಸ್‌ಗಳಲ್ಲಿ ಹೂಡಿಕೆ ಮಾಡುತ್ತಿರುವುದು ಇದಕ್ಕೆ ಕಾರಣವಾಗಿದೆ. 2022-25ರ ಅವಧಿಯಲ್ಲಿ ಒಟ್ಟು ದೇಶೀಯ ಹಣಕಾಸು ಉಳಿತಾಯವು 25 ಲಕ್ಷ ಕೋಟಿ ರುಪಾಯಿಗಳಿಂದ 35 ಲಕ್ಷ ಕೋಟಿ ರುಪಾಯಿಗಳಿಗೆ ಏರಿಕೆಯಾಗಿತ್ತು.

ಸ್ವಾರಸ್ಯವೇನೆಂದರೆ, ಭಾರತದ ಒಟ್ಟಾರೆ ದೇಶೀಯ ಉಳಿತಾಯದ ಪ್ರಮಾಣ 29.2 ಪರ್ಸೆಂಟ್ ಅಮೆರಿಕ (18.1ಪರ್ಸೆಂಟ್), ಜರ್ಮನಿಗಿಂತ (27 ಪರ್ಸೆಂಟ್) ಹೆಚ್ಚು. ಜನ ಯಾವ ಕಾರಣಕ್ಕಾಗಿ ಉಳಿತಾಯ ಮಾಡುತ್ತಾರೆ? ತುರ್ತುಪರಿಸ್ಥಿತಿಗಳನ್ನು ನಿಭಾಯಿಸಲು, ಮಕ್ಕಳ ಭವಿಷ್ಯ, ಶಿಕ್ಷಣ, ಮದುವೆ, ಆದಾಯ ಸೃಷ್ಟಿ, ಟ್ರಾವೆಲ್, ಲೈಫ್ ಸ್ಟೈಲ್, ನಿವೃತ್ತಿಯ ಪ್ಲಾನಿಂಗ್ ಸಲುವಾಗಿ ಉಳಿತಾಯ ಮಾಡುತ್ತಾರೆ.

ಹೀಗಿದ್ದರೂ, ಭಾರತೀಯರಲ್ಲಿ 70 ಪರ್ಸೆಂಟ್ ಮಂದಿ ಸರಿಯಾದ ಆರೋಗ್ಯ ವಿಮೆ, ಜೀವ ವಿಮೆಯನ್ನು ಹೊಂದಿಲ್ಲ. ಇದರಿಂದಾಗಿ ಅವರ ಆಸ್ಪತ್ರೆ, ವೈದ್ಯಕೀಯ ಖರ್ಚು ವೆಚ್ಚಗಳು ಹೆಚ್ಚುತ್ತಿವೆ. ಈಗಿನ ಜಮಾನದ ಭಾರತೀಯರು ಹಳೆಯ ಮತ್ತು ಹೊಸ ತಂತ್ರಜ್ಞಾನ ಆಧಾರಿತ ಉಳಿತಾಯದ ಮಿಶ್ರಣವನ್ನು ಅನುಸರಿಸುತ್ತಿದ್ದಾರೆ.

ಮ್ಯೂಚುವಲ್ ಫಂಡ್‌ಗಳಲ್ಲಿ ಸಿಪ್ (ಸಿಸ್ಟಮ್ಯಾಟಿಕ್ ಇನ್ವೆಸ್ಟ್‌ಮೆಂಟ್ ಪ್ಲಾನ್) ಎಂಬ ವಿಧಾನ ಇದೆ. ಪ್ರತಿ ತಿಂಗಳೂ 500-1000 ರುಪಾಯಿಗಳಿಂದಲೂ ಇಲ್ಲಿ ಹೂಡಿಕೆ ಶುರು ಮಾಡಬಹುದು. ಇದು ಕಾಲಾಂತರದಲ್ಲಿ ಕಂಪೌಂಡಿಂಗ್ ಇಂಟರೆ (ಚಕ್ರಬಡ್ಡಿ) ಸೇರಿಕೊಂಡು ದೊಡ್ಡ ಮೊತ್ತವಾಗುತ್ತದೆ.

ಇನ್ಸ್ಟಾಗ್ರಾಮ್ ಮತ್ತು ಯೂಟ್ಯೂಬ್‌ನಿಂದ ಜನರಲ್ಲಿ ಪರಸ್ಪರ ಹೋಲಿಕೆ ಮಾಡುವ ಪ್ರವೃತ್ತಿ ಹೆಚ್ಚುತ್ತಿದೆ. ಇದು ಲೈಫ್ ಸ್ಟೈಲ್ ಹಣದುಬ್ಬರ ಹೆಚ್ಚಲು ಕಾರಣವಾಗಿದೆ. ಬರ್ತ್‌ಡೇಯನ್ನು ಅದ್ದೂರಿಯಾಗಿ ಆಚರಿಸುವುದು, ಬ್ರ್ಯಾಂಡೆಡ್ ಬಟ್ಟೆಬರೆಗಳನ್ನು ಧರಿಸುವುದು, ಮಕ್ಕಳನ್ನು ಅದ್ಭುತವಾಗಿ ಬೆಳೆಸುತ್ತಿದ್ದೇವೆ ಎಂಬುದನ್ನು ಜಾಲತಾಣಗಳಲ್ಲಿ ವೈಭವೀಕರಿಸಿ ತೋರಿಸುವುದನ್ನು ಕಾಣಬಹುದು.

ಇದರಿಂದ ಪರಸ್ಪರ ಹೋಲಿಕೆ ಮಾಡುವ ಚಾಳಿ ಉಂಟಾಗುತ್ತದೆ. ಇದು ಉಳಿತಾಯವನ್ನು ಮತ್ತಷ್ಟು ಕರಗಿಸುತ್ತದೆ. ಲಕ್ಷಗಟ್ಟಲೆ ಸಾಲ ಮಾಡುವುದರಿಂದ ಅದೇ ಚಿಂತೆಯಾಗಿ ಬಿಡುತ್ತದೆ. ಜೀವನದಲ್ಲಿ ಏನೂ ಮಾಡಿಲ್ಲ ಎಂಬ ಕೀಳರಿಮೆ ಕಾಡುತ್ತದೆ. ರಾತ್ರಿ ನಿದ್ದೆ ಬರುವುದಿಲ್ಲ. ಖಿನ್ನತೆ ಮನೆ ಮಾಡುತ್ತದೆ.

ಬೈ ನೌ, ಪೇ ಲೇಟರ್, ಝೀರೊ ಇಂಟರೆ ಇಎಂಐ ಮಾದರಿಯ ಸ್ಕೀಮ್;ಗಳು ಜನರನ್ನು ಹೆಚ್ಚೆಚ್ಚು ಸಾಲಗಾರರನ್ನಾಗಿಸುತ್ತವೆ. ಆದಾಯ ಮತ್ತು ಖರ್ಚುಗಳ ನಡುವೆ ಅಂತರ ಹೆಚ್ಚುವುದರಿಂದಲೂ ಸಾಲ ಖರೀದಿಸುವವರ ಸಂಖ್ಯೆ ಬೆಳೆಯುತ್ತದೆ.



ಹಲವಾರು ಮಂದಿ ಗೃಹ ಸಾಲ ಪಡೆಯುತ್ತಾರೆ. ಆದರೆ ಅವರ ಲೈಫ್ ಸ್ಟೈಲ್ ಖರ್ಚು ಗಗನಕ್ಕೇರಿರುವುದರಿಂದ ಪ್ರತಿ ವರ್ಷ ಒಂದು ಹೆಚ್ಚುವರಿ ಇಎಂಐ ಕಟ್ಟಲೂ ಅವರಿಂದ ಸಾಧ್ಯವಾಗುವುದಿಲ್ಲ. ಇದರ ಪರಿಣಾಮ ನಿರಂತರವಾಗಿ ಸಾಲದ ಕೂಪದಲ್ಲಿ ಬಿದ್ದು ನರಳುತ್ತಾರೆ. ದೀರ್ಘಾವಧಿಯ ಸಾಲದಿಂದ ಬ್ಯಾಂಕಿನ ಉದ್ಧಾರವಾದೀತೇ ಹೊರತು, ಸಾಲಗಾರನದ್ದಲ್ಲ ಎಂಬುದು ವಾಸ್ತವ.

ಆದರಿಂದ ದೀರ್ಘಾವಧಿಯ ಸಾಲವನ್ನು ಅವಧಿಗೆ ಮುನ್ನ ತೀರಿಸಿ ಸಾಲ ಮುಕ್ತರಾಗಲು ಮರೆಯಬಾರದು. ಉದಾಹರಣೆಗೆ 20 ಲಕ್ಷ ರುಪಾಯಿಗಳ ಸಾಲವನ್ನು 8.5 ಪರ್ಸೆಂಟ್ ಬಡ್ಡಿ ದರದಲ್ಲಿ 15 ವರ್ಷಗಳ ಅವಧಿಗೆ ಪಡೆದಿದ್ದೀರಿ ಎಂದು ಇಟ್ಟುಕೊಳ್ಳಿ. ಈ ಅವಧಿಯಲ್ಲಿ ನೀವು ಬಡ್ಡಿಯಾಗಿ 15.45 ಲಕ್ಷ ರುಪಾಯಿ ಕಟ್ಟಿರುತ್ತೀರಿ. ಅಸಲು ಸೇರಿ ಒಟ್ಟು ಮೊತ್ತ 35.45 ಲಕ್ಷ ರುಪಾಯಿಗಳಾಗುತ್ತದೆ.

ಒಂದು ವೇಳೆ ಇದನ್ನು 25 ವರ್ಷಗಳಲ್ಲಿ ಕಟ್ಟಿದರೆ, ಬಡ್ಡಿಯಾಗಿ 23.31 ಲಕ್ಷ ರುಪಾಯಿಗಳನ್ನು ಬ್ಯಾಂಕಿಗೆ ಪಾವತಿಸಿರುತ್ತೀರಿ. ಜತೆಗೆ ಅಸಲು ಸೇರಿದಾಗ ಒಟ್ಟು 48.31 ಲಕ್ಷ ರುಪಾಯಿ ಆಗುತ್ತದೆ. ಇಂಥ ವಿಚಾರಗಳಿಗೆ ಸಂಬಂಧಿಸಿ ತಿಳುವಳಿಕೆ ಗಳಿಸುವುದು ಅವಶ್ಯಕ. ಇಲ್ಲದಿದ್ದರೆ ಹಣಕಾಸು ಸಲಹೆಗಾರರ ನೆರವು ಪಡೆಯಲು ಹಿಂಜರಿಯಬಾರದು.

ಹಾಗಾದರೆ ಖರ್ಚು ವೆಚ್ಚಗಳು ಮತ್ತು ಉಳಿತಾಯದ ನಡುವೆ ಸಮತೋಲನ ಕಂಡುಕೊಳ್ಳುವುದು ಹೇಗೆ? ಮೊದಲು ನಮ್ಮ ಆದಾಯ ಎಷ್ಟು ಮತ್ತು ಅದರೊಳಗೆಯೇ ಮಿತವ್ಯಯ, ಹೂಡಿಕೆಯನ್ನು ಮಾಡಬೇಕು ಎಂಬ ವಿವೇಕವನ್ನು ಕುಟುಂಬದ ಎಲ್ಲ ಸದಸ್ಯರೂ ಮಾಡಿಕೊಳ್ಳಬೇಕು. ದೇಶ-ರಾಜ್ಯಗಳಿಗೆ ಹೇಗೆ ಬಜೆಟ್ ಅಗತ್ಯವೋ, ಕುಟುಂಬಕ್ಕೂ ಆಯ-ವ್ಯಯದ ಲೆಕ್ಕಾಚಾರ ಇರಲೇಬೇಕು.

ಬಜೆಟ್‌ಗೆ ಒಂದು ಉದ್ದೇಶವಿರುತ್ತದೆ. ನಿಮ್ಮ ಅಗತ್ಯಗಳು, ಬಯಕೆಗಳು, ಉಳಿತಾಯ ಮತ್ತು ಹೂಡಿಕೆಗಳನ್ನು ವರ್ಗೀಕರಿಸಿ. ಉಳಿತಾಯ ಮತ್ತು ಇನ್ವೆಸ್ಟ್‌ಮೆಂಟ್ ಬಳಿಕ ಮಿಕ್ಕಿದ್ದನ್ನು ಮಾತ್ರ ಖರ್ಚು ಮಾಡಿ. ಆಟೊಮ್ಯಾಟಿಕ್ ಸೇವಿಂಗ್ಸ್ ಯಾವತ್ತಿಗೂ ಪರಿಣಾಮಕಾರಿ. ಎಸ್‌ಐಪಿ, ಪಿಎಫ್, ಎಮರ್ಜೆನ್ಸಿ ಫಂಡ್‌ಗಳನ್ನು ಯಾವ ಕಾರಣಕ್ಕೂ ಕೈಬಿಡದಿರಿ.

ಉಳಿತಾಯದ ಅಭ್ಯಾಸವು ತನ್ನಿಂತಾನೆ ಆದಾಗ ಶಿಸ್ತು ಉಂಟಾಗುತ್ತದೆ. ನಿಮ್ಮ ಫೈನಾನ್ಸ್ ನಿಮ್ಮ ವೈಯಕ್ತಿಕ. ಸೋಶಿಯಲ್ ಮೀಡಿಯಾಗಳು ಲೈಫ್ ಸ್ಟೈಲ್‌ಗಳನ್ನು ತೋರಿಸುತ್ತವೆ. ಆದರೆ ಅದು ವಾಸ್ತವವಲ್ಲ. ನಿಮ್ಮ ಬೆಳವಣಿಗೆ ಬಗ್ಗೆ ಫೋಕಸ್ ಕೊಡಿ. ಬೇರೆಯವರ ತೋರಿಕೆಯ ಆಡಂಬರಕ್ಕಲ್ಲ. ಹೂಡಿಕೆಯೇ ಇಲ್ಲದ ಉಳಿತಾಯ ಗುರಿ ಇಲ್ಲದ ಓಟದಂತೆ. ಜ್ಞಾನ ಮತ್ತು ಸಮಯವನ್ನು ಕೊಡುವುದರಿಂದ ಹಣವು ಬೆಳೆಯುತ್ತದೆ. ನಿಮ್ಮ ಸಾಲವು ಉತ್ಪಾದಕ ಚಟುವಟಿಕೆಗೆ ಬಳಕೆಯಾಗುತ್ತಿದ್ದರೆ ಮಾತ್ರ ಸಂಪತ್ತಿಗೆ ಸಮಾನ. ಇಲ್ಲದಿದ್ದರೆ ಭವಿಷ್ಯದ ನಿಮ್ಮ ಆದಾಯವನ್ನು ಅದು ಕಸಿದುಕೊಳ್ಳುತ್ತದೆ ಎಂಬುದನ್ನು ಮರೆಯುವಂತಿಲ್ಲ.

ನಾವೀಗ ಬಾಳುತ್ತಿರುವ ಕಾಲದ ವಾಸ್ತವ ಏನೆಂದರೆ, ಇದೊಂದು ಸ್ಪೆಂಡಿಂಗ್ ಇಕಾನಮಿ. ಕೊಳ್ಳುಬಾಕ ಸಂಸ್ಕೃತಿಯನ್ನು ವ್ಯಾಪಕವಾಗಿ ಉತ್ತೇಜಿಸಲಾಗುತ್ತದೆ. ಬ್ರ್ಯಾಂಡ್‌ಗಳು ವಾಸ್ತವವಾಗಿ ದುಬಾರಿಯಾಗಬಲ್ಲ ಕನಸುಗಳನ್ನು ಭರ್ಜರಿಯಾಗಿ ಮಾರಾಟ ಮಾಡುತ್ತವೆ. ಕ್ರೆಡಿಟ್ ಕಾರ್ಡ್‌ಗಳು ಇಂಥ ಕನಸುಗಳನ್ನು ಆಕರ್ಷಕಗೊಳಿಸುತ್ತವೆ.

ಖರೀದಿಯ ಲಯದಲ್ಲಿ ಕಳೆದುಹೋಗುವುದು ಸುಲಭ. ಆದರೆ-ಸಾಲವನು ಕೊಂಬಾಗ ಹಾಲೋ ಗರವನು ಉಂಡಂತೆ, ಸಾಲಿಗರು ಕೊಂಡು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ ಎಂಬ ಸರ್ವಜ್ಞನ ವಚನವನ್ನು ಮರೆಯುವವರೇ ಹೆಚ್ಚು. ಮಿಡ್ಲ್ ಕ್ಲಾಸ್ ಜನರ ಮನಸ್ಥಿತಿ ಕೂಡ ಪ್ರಭಾವ ಬೀರುತ್ತದೆ.

ಉದಾಹರಣೆಗೆ ಮಾಸಿಕ ವೇತನ ಪಡೆಯುವವರ ಚಿಂತನೆ ಗಮನಿಸಿ. ಸ್ಯಾಲರಿ ಬರುತ್ತದೆ. ಅವರಿಗೆ ರಿಲೀ- ಸಿಗುತ್ತದೆ. ಇಎಂಐ ಮತ್ತು ಲೈಫ್ ಸ್ಟೈಲ್ ಖರ್ಚುಗಳು ಬೆನ್ನ ಇರುತ್ತವೆ. ಏನಾದರು ಉಳಿದರೆ ಮಾತ್ರ ಉಳಿತಾಯ. ಇಲ್ಲದಿದ್ದರೆ ಇಲ್ಲ. ಸೇವಿಂಗ್ಸ್ ನಿರ್ಧಾರವನ್ನು ಮುಂದೂಡಿಕೆ ಮಾಡುತ್ತಾ ಹೋಗುತ್ತಾರೆ. ಮತ್ತೆ ಸಂಬಳ ಬಂದಾಗ ನಿರಾಳರಾಗುತ್ತಾರೆ.

ಇಲ್ಲಿಗೆ ಒಂದು ಸರ್ಕಲ್ ಮುಗಿದಿರುತ್ತದೆ. ಅದೇ ಪುನರಾವರ್ತನೆಯಾಗುತ್ತದೆ. ತಿಂಗಳುಗಳು-ವರ್ಷಗಳು ಹೀಗೆ ಕಳೆದುಹೋಗುತ್ತದೆ. ಈ ಸುಳಿಯಿಂದ ಹೊರಬರಬೇಕಿದ್ದರೆ ಏನು ಮಾಡಬೇಕು? ಉಳಿತಾಯವನ್ನು ಮೊದಲು ಮಾಡಬೇಕು. ಬಳಿಕ ಉಳಿದದ್ದನ್ನು ಮಾತ್ರ ಖರ್ಚು ಮಾಡಬೇಕು. ಉಳಿಸಿದ್ದನ್ನು ಹೂಡಿಕೆ ಮಾಡಬೇಕು. ಹಣದ ಬಗ್ಗೆ ಭಯ ಬೇಡ, ಆದರೆ ಕಲಿಯಲು ಮರೆಯದಿರಿ. ಹಣಕಾಸು ಸ್ವಾತಂತ್ರ್ಯ ಗಳಿಸಲು ಹೆಜ್ಜೆಗಳನ್ನಿಡಿ. ಅನ್ಯ ಮಾರ್ಗ ಇಲ್ಲಿಲ್ಲ.

**- ಕೇಶವ** ಪ್ರಸಾದ್ ಬಿ



---

**ನನಗಿಷ್ಟವಾದ ಬೊಂಬೆಯನ್ನು ಕೈಗೆತ್ತಿಕೊಂಡು ಅಮ್ಮನ ಕಡೆ ನೋಡಿ ನಕ್ಕಿದ್ದೆ. ಅಮ್ಮ ನಿನಗೆ ಇಷ್ಟವಾಯಿತಾ? ಎಂದಿದ್ದಳು. ನಾನು ಅವಳ ಕೈ ಹಿಡಿದು ಜಗ್ಗಿದ್ದೆ. ಸರಿ ಇರು ಎಂದು ಹೇಳಿ ಅದರ ಬೆಲೆ ಕೇಳಿದಳು. ಅಂಗಡಿಯವನು 11 ರುಪಾಯಿ ಎಂದ. ಅಮ್ಮ ತನ್ನ ಪರ್ಸನ್ನು ತೆಗೆದು ಜಿಪ್ ತೆಗೆದು, ತಡಕಾಡಿ ಅದರಲ್ಲಿ ಕೇವಲ ಒಂಬತ್ತು ರೂಪಾಯಿ ಇರುವುದು ಕಂಡು, ಕಡಿಮೆ ಇಲ್ಲವೇ? ಎಂದು ಮೆಲ್ಲನೆ ಕೇಳಿದ್ದಳು.**


# ಮಣ್ಣಿನ ಬೆಲೆಯ ಹೂದಾನಿ

ಅಂದು ಆ ನನ್ನ ರಸ್ತೆ ಬದಿ ಅಂಗಡಿಯಲ್ಲಿ ಯಥಾ ಪ್ರಕಾರ ಮಣ್ಣಿನ ಬೊಂಬೆಗಳನ್ನ ಮಾರುತ್ತಿದ್ದೆ. ಆ ಹುಡುಗಿ ನಡೆದು ಬಂದಳು. ಮುಂದಿನ ಸಾಲಿನಲ್ಲಿ ಇಟ್ಟಿದ್ದ ಆ ಹೂದಾನಿಯನ್ನು ನೋಡುತ್ತಾ ನಿಂತಳು. ಅವಳ ಕಣ್ಣುಗಳಲ್ಲಿ ಏನೋ ಆನಂದ ಕಂಡಿತು. ಅದನ್ನು ತದೇಕಚಿತ್ತ ನೋಡಿ ಈ ಬದಿ ತಿರುಗಿ ಆ ಬದಿ ತಿರುಗಿ ನೋಡಿ, ಕೊನೆಗೆ ಮೆಲ್ಲನೆ ಕೈಗೆತ್ತಿಕೊಂಡು ಅದನ್ನು ಸವರುತ್ತ ಸಂತೋಷಿಸಿದಳು. ಇದಕ್ಕೆ ಎಷ್ಟಾಗುತ್ತದೆ? ಎಂದಳು.

ನಾನು ಅವಳ ಕಣ್ಣಿನ ಹೊಳಪನ್ನು ಗಮನಿಸಿದ್ದವನಾಗಿ ಯೋಚಿಸಿ, 100 ರೂಪಾಯಿ ಕೊಡಿ ಸಾಕು ಎಂದೆ. ಇದೇ ಹೂದಾನಿ ಇತರೆ ಅಂಗಡಿಗಳಲ್ಲಿ 120-130 ರೂಪಾಯಿಗೆ ಮಾರುತ್ತಿದ್ದಾರೆ ಎಂಬ ವಿಷಯ ನನಗೂ ತಿಳಿದಿತ್ತು. ಆದರೆ ಈ ಹೂದಾನಿ ಅವಳಿಗೆ ಇಷ್ಟವಾಗಿದೆ ಎಂದು ಅರಿತು ನಾನು ಕಡಿಮೆ ಬೆಲೆ ಹೇಳಿದೆ. ಅದೇಕೋ ಅವಳು ಮತ್ತೆ ಅದನ್ನು ನನ್ನ ಕೈಯಲ್ಲಿಟ್ಟು ಜೋಲು ಮುಖ ಹಾಕಿ ಹೊರಟೇ ಬಿಟ್ಟಳು. ಅವಳು ಏಕೆ ಹಾಗೆ ಮಾಡಿದಳು ನನಗೆ ಅರ್ಥವಾಗಲಿಲ್ಲ.

ಅವಳು ಮತ್ತೆ ಸುತ್ತಿ ಬಂದು ಅದೇ ಹೂದಾನಿಯನ್ನ ನೋಡುತ್ತಾ ನಿಂತಳು. ಬೆಲೆ ಕಡಿಮೆ ಇಲ್ಲವೇ? ಎಂದಳು. ನಾನು ನಿಮಗಾಗಿ 90 ರುಪಾಯಿಗೆ ಕೊಡುತ್ತೇನೆ ಎಂದೆ. ಅವಳು ಮರು ಮಾತನಾಡಲಿಲ್ಲ, ಹೊರಟೇ ಹೋದಳು. ನನಗೂ ನಿರಾಸೆಯಾಯಿತು. ನಾನು ಚಿಕ್ಕಂದಿನಲ್ಲಿ ಅಮ್ಮನ ಜೊತೆ ಬೊಂಬೆ ಅಂಗಡಿಗೆ ಹೋಗಿದ್ದ ನೆನಪಾಯಿತು.

ನನಗಿಷ್ಟವಾದ ಬೊಂಬೆಯನ್ನು ಕೈಗೆತ್ತಿಕೊಂಡು ಅಮ್ಮನ ಕಡೆ ನೋಡಿ ನಕ್ಕಿದ್ದೆ. ಅಮ್ಮ ನಿನಗೆ ಇಷ್ಟವಾಯಿತಾ? ಎಂದಿದ್ದಳು. ನಾನು ಅವಳ ಕೈ ಹಿಡಿದು ಜಗ್ಗಿದ್ದೆ. ಸರಿ ಇರು ಎಂದು ಹೇಳಿ ಅದರ ಬೆಲೆ ಕೇಳಿದಳು. ಅಂಗಡಿಯವನು 11 ರುಪಾಯಿ ಎಂದ. ಅಮ್ಮ ತನ್ನ ಪರ್ಸನ್ನು ತೆಗೆದು ಜಿಪ್ ತೆಗೆದು, ತಡಕಾಡಿ ಅದರಲ್ಲಿ ಕೇವಲ ಒಂಬತ್ತು ರೂಪಾಯಿ ಇರುವುದು ಕಂಡು, ಕಡಿಮೆ ಇಲ್ಲವೇ? ಎಂದು ಮೆಲ್ಲನೆ ಕೇಳಿದ್ದಳು. ಅವನು ನಿರ್ಭಾವುಕನಾಗಿ ಇಲ್ಲ ಎಂದಿದ್ದ.



ಅಂದು ನನಗೆ ಅಳು ಬಂದಿತ್ತು. ತಲೆತಗ್ಗಿಸಿ ನಡೆದಿದ್ದೆ. ಅಮ್ಮನ ಕಣ್ಣು ಒದ್ದೆಯಾಗಿತ್ತು. ಹೀಗೆಯೇ ಮುಂದೊಮ್ಮೆ ಮತ್ತೊಂದು ಅಂಗಡಿಯಲ್ಲಿ ಕ್ರಿಕೆಟ್ ಬ್ಯಾಟ್ ನೋಡಿದ್ದೆ. ಅದನ್ನು ಕೊಳ್ಳುವ ಆಸೆ ನನ್ನಲ್ಲಿ, ಆಗಾಗ ಆ ಅಂಗಡಿಗೆ ಹೋಗಿ ಬ್ಯಾಟನ್ನ ಕೈಗೆತ್ತಿಕೊಳ್ಳುವುದು, ಅದರ ತೂಕ ನೋಡುವುದು ಹಿಡಿದು ಧೋನಿಯ ತರಹ ಬೀಸುವುದು, ಸರಿ ಇದೆ ಎಂದು ಖಾತರಿ ಮಾಡಿಕೊಳ್ಳುವುದು ನಡೆದೇ ಇತ್ತು.

ಎಲ್ಲ ಮಾಡಿದ ನಂತರ ಅದರ ಬೆಲೆ ಪ್ರತಿ ಬಾರಿ ಕೇಳುವುದು, ನಮ್ಮ ತಂದೆಯ ಜೊತೆ ಬರುತ್ತೇನೆ ಎಂದು ಹೇಳಿ ಹಿಂದಿರುವುದು ನನ್ನ ಅಭ್ಯಾಸವಾಯಿತು. ಕೊನೆಗೊಂದು ದಿಸ ಹಠ ಮಾಡಿ ತಂದೆಯನ್ನ ಕರೆದುಕೊಂಡು ಆ ಬ್ಯಾಟ್ ಕೊಡಿಸಿ ಎಂದೆ. ಅಪ್ಪ ನನ್ನ ಜೊತೆ ಬಂದರು. ನನಗೆ ಒಳಗೊಳಗೇ ಖುಷಿಯಾಗಿತ್ತು. ಅಪ್ಪ ಅದನ್ನು ಕೈಗೆತ್ತಿಕೊಂಡು ಬೆಲೆ ಎಷ್ಟು? ಎಂದರು. ಅವನು ಬೆಲೆ ಹೇಳಿದ. ಅಪ್ಪ ನನ್ನನ್ನು ಪಕ್ಕ ಕರೆದು ಹೇಳಿದರು, ಮುಂದಿನ ವಾರ ಕೆಲಸದ ಮೇಲೆ ಮುಂಬೈಗೆ ಹೋಗುತ್ತಿದ್ದೇನೆ. ಅಲ್ಲಿ ಇನ್ನೂ ಒಳ್ಳೆ ಗುಣ ಮಟ್ಟದ ಬ್ಯಾಟುಗಳು ದೊರೆಯುತ್ತದೆ. ನಿನಗೆ ತಂದುಕೊಡುತ್ತೇನೆ. ಒಂದು ತಿಂಗಳು ತಡ ಎಂದರು.

ನನಗೆ ಮತ್ತೆ ಅಳು ಬಂದಿತ್ತು. ಏಕೋ ಇವೆಲ್ಲ ಈಗ ನೆನಪಾಗುತ್ತಿವೆ. ಬಹುಶಃ ಈ ಹುಡುಗಿಯ ಕಥೆಯು ಅದೇ ಇರಬಹುದು. ಈ ಬೆಲೆ ಅವಳಿಗೆ ಎಟುಕದೆ ಹೋಗಿರಬೇಕು. ಅವಳ ಕನಸುಗಳನ್ನು ಅವಳ ಕಣ್ಣುಗಳು ಹೇಳುತ್ತಿವೆ. ಕನಸುಗಳು ನನಸಾಗದ ನೋವು ಆ ಕಣ್ಣುಗಳಲ್ಲಿ ಕಂಡಿದೆ. ನಾನು ಪಟ್ಟ ನೋವು ಈ ಹುಡುಗಿಯೂ ಏಕೆ ಪಡಬೇಕು.

ನನ್ನ ಬಗ್ಗೆ ನನಗೆ ಬೇಸರ ಬಂದಿತು. ನಾನು ಬದುಕಿನಿಂದ ಕಲಿತದ್ದು ಏನೂ ಇಲ್ಲವೇ? ನನ್ನ ಚಿಕ್ಕಂದಿನ ಕನಸುಗಳು ಗಾಯಗಳಾಗಿ ಹಾಗೆಯೇ ಮಾಯದೆ ಉಳಿದಿವೆ. ಇಂದು ಮತ್ತೊಂದು ಹುಡುಗಿಯ ಕನಸನ್ನ ನನಸಾಗುಸುವುದರ ಮೂಲಕ ನನ್ನ ಗಾಯದ ಆ ಕಲೆಗಳನ್ನ ಅಳಿಸಬಹುದೇ? ಆ ಹುಡುಗಿ ಮತ್ತೆ ಬರಬಾರದೇ? ಎಂದು ಆಶಿಸಿದೆ.

ಅದೇ ಸಮಯದಲ್ಲಿ ಹುಡುಗಿ ಮತ್ತೆ ನನ್ನ ಅಂಗಡಿಯ ಕಡೆ ಬರುತ್ತಿದ್ದಳು. ಬಂದವಳು ಅದೇ ಹೂದಾನಿ ಕೈಗೆತ್ತಿಕೊಂಡಳು. ಸರಿ ಈ ಬಾರಿ ಅವಳಿಗೆ ಇದನ್ನು ಕೊಟ್ಟುಬಿಡುತ್ತೇನೆ. ಬಿಟ್ಟಿ ಕೊಟ್ಟರೆ ಅವಳಿಗೆ ನೋವಾಗಬಹುದು. ಅವಳ ಸ್ವಾಭಿಮಾನಕ್ಕೆ ಧಕ್ಕೆ ಬರಬಹುದು. ಇರಲಿ ಇದಕ್ಕೆ ಆಗಿರುವ ಖರ್ಚು ಮಣ್ಣಿಗೆ 12 ರೂಪಾಯಿ. ಕುಸರಿ ಕೆಲಸಕ್ಕೆ ತಂದ ವಸ್ತುಗಳ ಬೆಲೆ ಮತ್ತೊಂದು ನಾಲ್ಕು ರೂಪಾಯಿ.

ಹಚ್ಚಿದ ಬಣ್ಣಕ್ಕೆ ಒಂದೂವರೆ ರೂಪಾಯಿ. ಎಲ್ಲ ಸೇರಿ ಹದಿನೇಳೂವರೆ. ಸರಿ, ನಾನು 15 ದಿವಸ ಕಷ್ಟ ಬಿದ್ದು ಮಾಡಿ, ಒಣಗಿಸಿ, ಬೇಯಿಸಿ, ಬಣ್ಣ ಹಚ್ಚಿ, ಮನೆಯಿಂದ ಈ ಬಾಡಿಗೆ ಅಂಗಡಿಗೆ ತಂದು ಅದನ್ನು ಇಲ್ಲಿ ಜೋಪಾನ ಇಟ್ಟುಕೊಂಡು ಕಾಪಾಡಿದ್ದೇನೆ. ನನಗೆ ಲಾಭವು ಬೇಡ. ನನ್ನ ಕೆಲಸದ ಪಗಾರವು ಬೇಡ. ಅವಳಿಗೆ ಆ ಮಣ್ಣಿನ ಬೆಲೆಗೆ ಕೊಟ್ಟು ಬಿಡುತ್ತೇನೆ. ಹಾಗೆಂದು ಯೋಚಿಸಿ ಅವಳಿಗೆ ಹೇಳಿದೆ ನೀವು ಹದಿನೇಳೂವರೆ ಕೊಡಿ ಸಾಕು ಎಂದೆ. ಅವಳ ಕಣ್ಣಲ್ಲಿ ಆನಂದ ಜಿನುಗಬಹುದೆಂದು ಎಣಿಸಿದ್ದೆ. ಆದರೆ ನೋವು, ಕೋಪ ಕಂಡಿತ್ತು. ಹದಿನೇಳೂವರೆ ರುಪಾಯಿ ಬೆಲೆಯ ವಸ್ತುವನ್ನ ನನಗೆ ನೂರು ರುಪಾಯಿ ಕೊಡು ಎಂದು ಕೇಳಿ ಇಷ್ಟು ಹೊತ್ತು ಮೋಸ ಮಾಡಲು ಹೊರಟಿದ್ದೆ ನೀನು. ನಿನಗೆ ಕನಿಕರವೇ ಇಲ್ಲವೇ? ಎಂದವಳು, ನನ್ನ ಕೈಯಲ್ಲಿ ಹೂದಾನಿ ಇಟ್ಟು ಸರಸರನೆ ಹೊರಟು ಹೋದಳು.

**- ಪೋಲೇನಹಳ್ಳಿ ರಮೇಶ್,**
(ಕವಿಯೊಬ್ಬರು ಊಟದ ನಡುವೆ ಪ್ರಾಸ್ತಾವಿಕವಾಗಿ ಹೇಳಿದ ಸಂಗತಿಯ ಆಧಾರಿತ ಕತೆ)

---

# ಸಿದ್ಧಿ ಸಾಧನೆ

ಸಿದ್ಧಿ ಎಂದರೆ ಶ್ರೇಷ್ಠವಾದ ಗುರಿ. ಗುರಿ ಸಾಧಿಸಲು ಸಾಧನೆ ಬಹಳ ಮಹತ್ವದ್ದು. ಸಾಧನೆ ಯಾವಾಗಲೂ ನಿರಂತರವಾಗಿ ದೀರ್ಘಕಾಲದವರೆಗೆ ಸಾಗಬೇಕಾಗುತ್ತದೆ. ಒಳ್ಳೆಯ ಫಲ ಕೊಡಬೇಕಾದರೆ ಸಾಧನೆ ಉತ್ಸಾಹದಿಂದ ಕೂಡಿರಬೇಕು. ಸಾಧನೆಯ ಪ್ರತಿ ಹಂತದಲ್ಲೂ ಕ್ಷಣ ಕ್ಷಣದಲ್ಲೂ ನಮಗೆ ಸಂತೋಷ ಕೊಡಬೇಕು.


ಒಬ್ಬ ಹಿಮದ ಬೆಟ್ಟ ಏರುತ್ತಾನೆ ಎಂದು ಭಾವಿಸಿ. ಅದರ ತುತ್ತ ತುದಿಗೆ ಹೋಗಬೇಕು ಅಂತ ಆತನ ಇಚ್ಛೆ. ಅದು ಒಂದು ದಿನದ ಸಾಧನೆ ಅಲ್ಲ, ನಿಧಾನವಾಗಿ ನಿಧಾನವಾಗಿ ವರ್ಷ ವರ್ಷಗಳ ಕಾಲ ಆತ ಬೆಟ್ಟವನ್ನು ಏರಿ ಇಳಿಯಬೇಕಾಗುತ್ತದೆ. ಮೊದಲನೇ ದಿನ ಎಷ್ಟು ಉತ್ಸಾಹ ಇತ್ತೋ, ಕೊನೆ ಕ್ಷಣದವರೆಗೆ ಆ ಉತ್ಸಾಹ ಉಳಿಯಬೇಕು. ಅಷ್ಟೇ ಅಲ್ಲ ಬೆಳೆಯುತ್ತಿರಬೇಕು. ಆ ಉತ್ಸಾಹವೇ ಅಂತಿಮವಾಗಿ ಆನಂದವಾಗಿ ಮಾರ್ಪಡುತ್ತದೆ. ಹೀಗೆ ಮಾಡಿದರೆ ಜೀವನಕ್ಕೊಂದು ಹೊಸ ಮೆರುಗು ಬರುತ್ತದೆ. ಜೀವನದ ಆಯಾಮಗಳು ಅರಳುತ್ತವೆ.

ನಾವು ನೂರು ವರ್ಷ ಬದುಕುತ್ತೇವೆ. ಬದುಕು ಸಾಧನೆಯಾಗಬೇಕು. ಬದುಕು ಸಿದ್ಧಿಯೂ ಆಗಬೇಕು. ಈ ಕ್ಷಣದ ಸಾಧನೆಯ ಸಿದ್ಧಿ ಈ ಕ್ಷಣದ ಕೊನೆ ಅಲ್ಲೇ ಅನುಭವಿಸಬೇಕು. ಹಾಗೆ ಪ್ರತಿ ಕ್ಷಣ ಸಾಧನೆ ಸಿದ್ಧಿ ಸಾಧನೆ ಸಿದ್ಧಿ. ಈ ಪ್ರವಾಹದಿಂದ ಜೀವನ ಸಾಗಬೇಕಾಗುತ್ತದೆ. ನಮ್ಮ ಸಿದ್ಧಿ ಯಾವುದೆಂದರೆ ಪ್ರತಿ ಕ್ಷಣವನ್ನು ಆನಂದದಿಂದ ತುಂಬುವುದು. ಪ್ರತಿ ಕ್ಷಣವನ್ನು ಪ್ರೇಮದಿಂದ ತುಂಬುವುದು. ಎಲ್ಲಾ ಸಿದ್ಧಿಗಳಲ್ಲಿ ಅದು ಶ್ರೇಷ್ಠ. ಉದಾಹರಣೆಗೆ ಇಲ್ಲಿ ಒಂದು ಹೂವಿದೆ. ಅದು ಅರಳುವ ಕ್ಷಣ ಬೇರೆ, ಅದು ಸೌಂದರ್ಯ ಅಭಿವ್ಯಕ್ತಿ ಮಾಡುವ ಕ್ಷಣ ಬೇರೆಯಲ್ಲ, ಹೇಗೆ ಹೇಗೆ ಅರಳುತ್ತದೆ ಹಾಗೆ ಹಾಗೆ ಸೌಂದರ್ಯ ಅಭಿವ್ಯಕ್ತವಾಗುತ್ತದೆ. ಎಷ್ಟು ಹೂವಿನ ಕ್ಷಣಗಳೋ ಅಷ್ಟು ಮಧುರ ಕ್ಷಣಗಳು. ಮಧುರ ಕ್ಷಣಗಳನ್ನು ಅನುಭವಿಸುತ್ತಾ ಮನುಷ್ಯ ಬದುಕಬೇಕು. ಬದುಕು ಹೆಚ್ಚು ಅದ್ಭುತವಾಗಬೇಕು ಅಂದರೆ ಬಲ್ಲವರು ಹೇಳುತ್ತಾರೆ, ಇದೆ ಬದುಕು ಕೊನೆ ಇಲ್ಲದ ಅಮೃತವಾಗಬೇಕು. ಬದುಕು ನಿರಂತರ ಅದಕ್ಕೆ ಆದಿ ಅಂತ್ಯ ಇಲ್ಲ ಅನ್ನುವಷ್ಟು ಬದುಕು ಅರಳಬೇಕು. ಮನುಷ್ಯ ಬದುಕುವುದು ಒಂದು ಕ್ಷಣ.

ಬುದ್ಧನ ಹತ್ತಿರ ಒಬ್ಬ ಶಿಷ್ಯ ಹೋಗಿ, ಕೇಳಿದ. ಜೀವನ ಅಂದರೆ ಏನು?. ಬುದ್ಧ ಹೇಳುತ್ತಾನೆ, ಜೀವನ ಒಂದು ಕ್ಷಣ, ಎರಡು ಕ್ಷಣ ಕೂಡಿ ನಮ್ಮ ಹತ್ತಿರ ಬರುವುದಿಲ್ಲ, ಸಾವಿರ ಕ್ಷಣಗಳು ಒಂದೇ ಕ್ಷಣಕ್ಕೆ ಬರುವುದಿಲ್ಲ, ಪ್ರತಿ ಕ್ಷಣ ಕ್ಷಣ ಕ್ಷಣ ಬದುಕುವುದು. ಈ ಕ್ಷಣ ಹೋಯ್ತು ಅಂದರೆ ಹೋಯ್ತು ಅಷ್ಟೇ. ಬದುಕು ಅಂದರೆ ಈ ಕ್ಷಣದ ಬದುಕು. ನಾಳೆಯ ಬದುಕು ಎಂದು ಬರುವುದಿಲ್ಲ, ಇನ್ನೊಂದು ಕ್ಷಣದ ಬದುಕು ಈಗಿರುವುದಿಲ್ಲ, ಈ ಕ್ಷಣವನ್ನು ಸುಂದರ ಮಾಡಬೇಕು. ಈ ಕ್ಷಣವನ್ನು ಸಂತೋಷದಿಂದ ತುಂಬುವುದು. ಅದು ಜೀವನದ ಸಾಧನೆ. ಈ ಕ್ಷಣ ಎಷ್ಟು ಅದ್ಭುತ ಇರಬೇಕು ಅಂದರೆ ಆ ಕ್ಷಣ ಅಮೃತವಾಗಬೇಕು. ಆ ಕ್ಷಣ ಅಮೃತವಾಗಬೇಕು, ಅನಂತವಾಗಿರಬೇಕು. ಹಾಗೆ ಆ ಕ್ಷಣದಲ್ಲೇ ಬೆರೆತು ಹೋಗಬೇಕು. ಅಂತಹ ಜೀವನ ಸಾಗಬೇಕಾದರೆ ಮಧುರತೆ ಮನಸ್ಸನ್ನು ತುಂಬಬೇಕು. ಕಹಿ, ಹುಳಿ ಮನಸ್ಸಿನಲ್ಲಿ ತುಂಬಿದರೆ ಜೀವನ ಸಂತೋಷ ಹೇಗಾಗುತ್ತದೆ?. ಆನಂದ ಹೇಗೆ ಕೊಡುತ್ತದೆ?. ಎಷ್ಟೇ ಬುದ್ಧಿವಂತರು ಇರಬಹುದು?. ಎಷ್ಟೇ ಸಶಕ್ತರಿರಬಹುದು, ಬಲಾಢ್ಯರಿರಬಹುದು?. ಮಧುರತೆ ಹಾಗೆ ಬರುವುದಿಲ್ಲ, ಮಧುರತೆ ತುಂಬಬೇಕಾದರೆ ಮನಸ್ಸು ಹಸನಾಗಿರಬೇಕು. ಅಲ್ಲಿ ಪ್ರೇಮ ತುಂಬುತ್ತದೆ. ಅಂತಹ ಮಧುರ ಸಾಧನೆಯೇ ಭಕ್ತಿ ಸಾಧನೆ. ಮನಸ್ಸು ಮುಕ್ತ, ಹಗುರ ಮತ್ತು ಸರಳ ಸ್ವಚ್ಛವಾಗಿರಬೇಕು. ನೀರು ಇದೆ. ಸ್ವಚ್ಛ ಇದೆ. ನೀರನ್ನು ಯಾರು ನಿರ್ಮಾಣ ಮಾಡುವುದಿಲ್ಲ. ಆದರೆ ಹೊಲಸು ಕೂಡಿರುತ್ತದೆ. ಹೊಲಸು ಕೂಡಿದಾಗಲೂ ನೀರು ನೀರೆ. ಬೇಡದ್ದನ್ನು ತೆಗೆದಾಗ ನೀರು ಸ್ವಚ್ಛವೆ ಆಗುತ್ತದೆ. ಮೋಡದಿಂದ ಬೀಳುವ ನೀರು ಸ್ವಚ್ಛವೇ. ನಾವು ಹುಟ್ಟಿದಾಗ ಮನಸ್ಸು ಸ್ವಚ್ಛ ಮಧುರ. ಬದುಕು ಯಾವಾಗ ಆರಂಭ ಆಗುತ್ತದೊ ಆವಾಗ ಹೊಲಸು ಕೂಡುತ್ತದೆ. ಇದರರ್ಥ ನೀರು ಕೆಟ್ಟಿದೆ ಅಂತ ಅಲ್ಲ. ಮನಸ್ಸು ಕೆಟ್ಟತು ಅಂತ ಅಲ್ಲ. ಮನಸ್ಸಿನಲ್ಲಿ ಹೊಲಸು ಮಿಶ್ರಣ ಆಯಿತು. ಏನು ಮಿಶ್ರಣ ಆಯಿತೋ ಅದನ್ನು ತೆಗೆದು ಹಾಕಿದಾಗ ನೀರು ಸ್ವಚ್ಛ. ಬೇಕಾದ ನೀರು ತೆಗೆದುಕೊಳ್ಳಿ ಅದು2. ಅದರಲ್ಲಿ ಏನೂ ಸೇರುವುದಿಲ್ಲ. ಆದರೆ ಸೇರಿದಂತೆ ಆಗಿರುತ್ತದೆ. ಅದು ಒಳಗೆ ಭೇದಿಸುವುದಿಲ್ಲ. ನೀರಿನ ಕಣ ಕಣಗಳ ಮಧ್ಯೆ ಸೇರಿಕೊಂಡಿರುತ್ತದೆ. ನೀರಿನ ಅಂತರಂಗಕ್ಕೆ ತಿಳಿಯುವುದಿಲ್ಲ. ಎಷ್ಟೇ ಹೊಲಸು ನೀರಿರಲಿ, ಅದನ್ನು ಕಾಯಿಸಿದರೆ, ಸ್ವಚ್ಛ ನೀರು ಆವಿಯಾಗಿ ಹೊರಗೆ ಹೋಗೇಬಿಡುತ್ತದೆ. ಹೊಲಸು ಮಾತ್ರ ಕೆಳಗೆ ಉಳಿಯುತ್ತದೆ. ಹಾಗೆಯೇ ಮನಸ್ಸು. ಅದು ಯಾವಾಗಲೂ ಮಧುರ. ಹುಳಿಯಲ್ಲ, ಕಹಿಯಲ್ಲ. ಅಂತಹ ಅತ್ಯದ್ಭುತ ಮನಸ್ಸು ನಿಸರ್ಗದ ಕಾಣಿಕೆ. ಇದು ಅಪರೂಪದ ಅಮೂಲ್ಯ ಸಂಪತ್ತು. ಇದರಷ್ಟು ದೊಡ್ಡದು ಯಾವುದು ಇಲ್ಲ. ಮಧುರ ಭಾವ ಇದ್ದರೆ ಜಗತ್ತು ಮಧುರವಾಗುತ್ತದೆ. ನೋಡಿದ್ದೆಲ್ಲ ಮಧುರ ಅನಿಸುತ್ತದೆ. ಹೇಳಿದ್ದೆಲ್ಲ ಮಧುರವಾಗುತ್ತದೆ. ಹಾಗೆ ಅಷ್ಟು ಅದ್ಭುತ. ಭಾವ ಹೊಲಸಾದರೆ ಜಗತ್ತು ಹೊಲಸಾಗುತ್ತದೆ. ನೋಡಿದ್ದೆಲ್ಲ ಹೊಲಸು ಅನಿಸುತ್ತದೆ. ಕೇಳಿದ್ದೆಲ್ಲ ಹೊಲಸು ಅನಿಸುತ್ತದೆ. ಮಧುರ ಭಾವ ಅತ್ಯಂತ ಸ್ವಚ್ಛ ಇರುತ್ತದೆ. ಮತ್ತೆ ಪವಿತ್ರವಾಗಿರುತ್ತದೆ. ಸ್ವಚ್ಛವಾಗಿದ್ದರೆ ಸತ್ಯದರ್ಶನವಾಗುತ್ತದೆ. ನಾರದ ಮಹರ್ಷಿ ಹೇಳುತ್ತಾನೆ ಈ ಸ್ವಚ್ಛತೆ, ಪವಿತ್ರತೆ ಕಾಪಾಡಲು ಅವ್ಯಾವೃತ್ತ ಭಜನಾ, ವಸ್ತು ತ್ಯಾಗ, ಸಂಗತ್ಯಾಗ ನಿರಂತರ ಸಾಗಬೇಕು. ಅವ್ಯಾವೃತ್ತ ಭಜನಾ ಎಂದರೆ ಮನಸ್ಸು ಒಂದೇ ಕಡೆ ಹರಿಯಬೇಕು. ಅಲ್ಲಿ ಇಲ್ಲಿ ನಿಲ್ಲಬಾರದು.

ನದಿ ಪ್ರಾರಂಭದಲ್ಲಿ ಸಣ್ಣದಾಗಿರುತ್ತದೆ. ಹರಿಯಲು ಪ್ರಾರಂಭಿಸುತ್ತದೆ. ಅದಕ್ಕೆ ಕೇಳಿ, ಎಲ್ಲಿ ಹೋಗುತ್ತೀಯ? ಅಂತ. ಅದು ಹೇಳುತ್ತದೆ ಸಾಗರಕ್ಕೆ ಹೋಗುತ್ತೀನಿ ಅನ್ನುತ್ತದೆ. ಎಲ್ಲಿದೆ ಸಾಗರ ಅಂತ ಕೇಳಿದರೆ. ಅದು ಹೇಳುತ್ತದೆ ಅದರ ಬಗ್ಗೆ ಚಿಂತೆ ಇಲ್ಲ. ಎಲ್ಲಾದರೂ ಇರಲಿ?. ಎಷ್ಟು ದೂರವಾದರೂ ಇರಲಿ?. ಅದು ನನಗೆ ಮಹತ್ವದಲ್ಲ, ಹರಿಯೋದು ಮಹತ್ವದ್ದು ಅಷ್ಟೇ. ನನಗೆ ಗೊತ್ತಿದೆ ನಾನು ಹರಿಯುತ್ತಾ, ಹರಿಯುತ್ತಾ, ಹರಿಯುತ್ತಾ ಇದ್ದರೆ ಅದು ಎಲ್ಲೇ ಇರಲಿ ನಾನು ಹೋಗಿ ಅದು ತಲುಪುತ್ತೇನೆ. ಸಾಗರದೊಳಗೆ ಬೆರೆತು ಹೋಗುತ್ತೇನೆ. ನಾನು ಹರಿಯೋದಷ್ಟೇ ಕೆಲಸ. ಹಾಗೆ ಮಧುರ ಮನಸ್ಸು ಸದಾ ಹರಿಯುತ್ತಾ ಇದ್ದರೆ ಅದು ಮೇರೆ ಇಲ್ಲದ ಸತ್ಯ. ವಸ್ತುವಿನ ಸಾಗರದಲ್ಲಿ ಬೆರೆತು ಒಂದಾಗುತ್ತದೆ. ಪಕ್ಕ ಎಂದು ವಿಚಾರ ಮಾಡುವುದಿಲ್ಲ. ಎಲ್ಲಿ ಹೋಗಬೇಕು?. ಎಷ್ಟು ದೂರ ಹೋಗಬೇಕು?. ಎಷ್ಟು ದೂರ ಸಾಗಬೇಕು?. ಆತ ಈ ಕ್ಷಣವನ್ನು ಮಧುರ ಮಾಡಿಕೊಳ್ಳುತ್ತಾ ಹೋಗುತ್ತಾನೆ. ಅವ್ಯಾವೃತ್ತ ಅಂದರೆ ನಿರಂತರ ಭಜನಾತ್ ಅಂದರೆ ಹರಿಯುವುದು.

ಜಗತ್ತಿನಲ್ಲಿ ಆಕರ್ಷಣೆಗಳು ಒಮ್ಮೊಮ್ಮೆ ನಿಲ್ಲಿಸುತ್ತದೆ. ಆವಾಗ ನಿಲ್ಲುವ ಸಾಧ್ಯತೆ ಇದೆ. ಮಧುರ ಭಾವ ಜಗತ್ತಿನಲ್ಲಿ ನಿರಂತರವಾಗಿ ಹರಿಯುತ್ತಿರಬೇಕು. ವಾಲ್ಮೀಕಿ ರಾಮಾಯಣದಲ್ಲಿ ಒಂದು ಅದ್ಭುತ ಘಟನೆ ಬರೆಯುತ್ತಾನೆ. ಶಬರಿಗೆ ಗುರುಗಳು ಹೇಳುತ್ತಾರೆ. ರಾಮ ಬರುತ್ತಾನೆ ನೀನು ದಾರಿ ಕಾಯಿ ಅಂತ. ಆಕೆಗೆ ರಾಮ ಯಾರು? ಅಂತ ಗೊತ್ತಿಲ್ಲ. ಯಾವಾಗ ಬರುತ್ತಾನೆ?. ಎಲ್ಲಿ ಬರುತ್ತಾನೆ?. ಅಂತ ಗೊತ್ತಿಲ್ಲ. ಎಲ್ಲಿ ಕಾಯಬೇಕು?. ಅಂತನು ಗೊತ್ತಿಲ್ಲ. ನಾನು ಎಲ್ಲಿ ದಾರಿ ಕಾಯುತ್ತೇನೆ?. ಅಲ್ಲಿಗೆ ಬರಬೇಕು. ಆತ ಬರೋತನಕ, ನಾನು ದಾರಿ ಕಾಯಬೇಕು. ಆದರೆ ನಾವು, ಎಷ್ಟೊತ್ತಿಗೆ? ಯಾವ ಕಡೆಯಿಂದ ಬರುತ್ತಾನೆ?. ಅವ ಹೇಗಿದ್ದಾನೆ?. ಎಲ್ಲಾ ಮಾಹಿತಿ ಕೊಟ್ಟರೆ ನಾವು ದಾರಿ ಕಾಯೋದು. ಶಬರಿಗೆ ಮೊಬೈಲ್ ಇರಲಿಲ್ಲ. ಯಾವ ಮಾಧ್ಯಮ ಇರಲಿಲ್ಲ. ಬರ್ತಾನೆ, ನಾನು ದಾರಿ ಕಾಯಬೇಕು ಅಷ್ಟೇ ಅಂದಳು ಶಬರಿ. ನಾವು ಸಣ್ಣ ಸಣ್ಣ ಸಾಧನೆಗೂ ಬೇಜಾರ್ ಮಾಡಿಕೊಳ್ಳುತ್ತೀವಿ. ಇನ್ನೂ ಆಗಲಿಲ್ಲ ಅನ್ನುತ್ತೇವೆ. ಹಿಂದೆ ಒಂದು ಮಾವಿನ ಗಿಡ ನೆಟ್ಟರೆ ಹಣ್ಣು ಬರಲು 10 ವರ್ಷ ಕಾಯುತ್ತಿದ್ದರು. ನಾವು ಅಷ್ಟು ದಿನ ಯಾಕೆ ದಾರಿ ಕಾಯಬೇಕು. ಐದು ವರ್ಷದಲ್ಲಿ ಬರಬೇಕು ಅನ್ನುತ್ತೇವೆ. ಎಷ್ಟು ನಿಧಾನ ಆಗುತ್ತದೆಯೋ? ಅಷ್ಟು ಮಧುರ. ಅಷ್ಟು ಆರೋಗ್ಯಕರ. ಜೀವನ ಎಂದರೆ ಸಾಧನೆಯ ಅನುಭವ. ಸಿದ್ಧಿ ಮಹತ್ವದಲ್ಲ, ಮಾಡುವುದು ಮಹತ್ವದ್ದು. ಬದುಕು ಬಹಳ ಮಹತ್ವದ್ದು. ಬದುಕಿನ ಅಂತ್ಯವಲ್ಲ, ಪ್ರತಿಯೊಂದು ಕ್ಷಣವನ್ನು ಸಂತೋಷದಿಂದ ಅನುಭವಿಸುವುದು. ಶಬರಿಯ ದೈನಂದಿನ ಜೀವನ ಹೇಗಿತ್ತು ...? ಅಂದರೆ ಒಂದು ಸಾದಾ ಸಣ್ಣ ಗುಡಿಸಲು ಹಾಕಿಕೊಂಡು, ವಾಸ ಮಾಡಿದ್ದಳು. ಆಕೆಗೆ ಯಾರಿಲ್ಲ. ಪ್ರತಿದಿನ ಇಂದು ರಾಮ ಬಂದೇ ಬರುತ್ತಾನೆ ಅಂತ ಏಳುವುದು. ರಾಮ ಬರುತ್ತಾನೆ ಅಂತ ಕಸ ಹೊಡೆಯುತ್ತಿದ್ದಳು. ನೀರು ಹಾಕುತ್ತಿದ್ದಳು ಹೂವ ತಂದು ಸಿಂಗರಿಸುತ್ತಿದ್ದಳು. ಪ್ರತಿದಿನ ಹೀಗೆ ಮಾಡುತ್ತಿದ್ದಳು. ಬರುವವರೆಗೆ... ರಾಮ ಬಂದರೆ ಎಷ್ಟು ಸಂತೋಷವೂ ಅಷ್ಟೇ ಸಂತೋಷ ಕೆಲಸ ಮಾಡುವುದರಾಗ. ಇದು ಅವ್ಯಾವೃತ್ತ



**» ಇದು ಅಪರೂಪದ ಅಮೂಲ್ಯ ಸಂಪತ್ತು. ಇದರಷ್ಟು ದೊಡ್ಡದು ಯಾವುದು ಇಲ್ಲ. ಮಧುರ ಭಾವ ಇದ್ದರೆ ಜಗತ್ತು ಮಧುರವಾಗುತ್ತದೆ. ನೋಡಿದ್ದೆಲ್ಲ ಮಧುರ ಅನಿಸುತ್ತದೆ. ಹೇಳಿದ್ದೆಲ್ಲ ಮಧುರವಾಗುತ್ತದೆ. ಹಾಗೆ ಅಷ್ಟು ಅದ್ಭುತ. ಭಾವ ಹೊಲಸಾದರೆ ಜಗತ್ತು ಹೊಲಸಾಗುತ್ತದೆ. ನೋಡಿದ್ದೆಲ್ಲ ಹೊಲಸು ಅನಿಸುತ್ತದೆ. ಕೇಳಿದ್ದೆಲ್ಲ ಹೊಲಸು ಅನಿಸುತ್ತದೆ. ಮಧುರ ಭಾವ ಅತ್ಯಂತ ಸ್ವಚ್ಛ ಇರುತ್ತದೆ. ಮತ್ತೆ ಪವಿತ್ರವಾಗಿರುತ್ತದೆ. ಸ್ವಚ್ಛವಾಗಿದ್ದರೆ ಸತ್ಯದರ್ಶನವಾಗುತ್ತದೆ. ನಾರದ ಮಹರ್ಷಿ ಹೇಳುತ್ತಾನೆ ಈ ಸ್ವಚ್ಛತೆ, ಪವಿತ್ರತೆ ಕಾಪಾಡಲು ಅವ್ಯಾವೃತ್ತ ಭಜನಾ, ವಸ್ತು ತ್ಯಾಗ, ಸಂಗತ್ಯಾಗ ನಿರಂತರ ಸಾಗಬೇಕು. ಅವ್ಯಾವೃತ್ತ ಭಜನಾ ಎಂದರೆ ಮನಸ್ಸು ಒಂದೇ ಕಡೆ ಹರಿಯಬೇಕು.**

ಭಜನಾ. ಅಡುಗೆಯನ್ನು ಎರಡು ತಾಸು ಮಾಡುತ್ತೇವೆ. ಬರ್‍ರಾ ಬರ್‍ರಾ ಅಂತ ಹತ್ತು ನಿಮಿಷದಲ್ಲಿ ಊಟ ಮಾಡಿ ಮುಗಿಸುತ್ತೀವಿ. ಊಟ ಮಾಡಿದ್ದರಲ್ಲಿ ಸಂತೋಷವಲ್ಲ ಅಡಿಗೆ ಮಾಡುವುದರಲ್ಲಿ ಆನಂದ. ಮಾಡುವ ಪ್ರತಿಯೊಂದು ಕೆಲಸದಲ್ಲಿ ಶಬರಿ ರಾಮನನ್ನು ನೆನೆಸುತ್ತಿದ್ದಳು. ಹಾಗೆ ನಾವು ಯಾವುದೇ ಕೆಲಸ ಮಾಡಿದರೂ ಮನಸ್ಸು ಸತ್ಯದತ್ತ ಹರಿಯುತ್ತಿರಬೇಕು.

ರವೀಂದ್ರನಾಥ್ ಟಾಗೋರ್ ಗೀತಾಂಜಲಿಯಲ್ಲಿ ಹೇಳುತ್ತಾರೆ ಜಗತ್ತು ಎಂದರೆ ದೇವನ ಉತ್ಸವ. ಭಗವಂತನೇ ಇದು ನಿನ್ನ ಉತ್ಸವದ ವಿಸ್ತಾರ. ದೇವನೇ ನನಗೂ ನೀನು ಆಮಂತ್ರಣ ನೀಡಿದ್ದಿ, ಉತ್ಸವದಲ್ಲಿ ಭಾಗವಹಿಸಲು. ನಾನು ನಿನ್ನ ಉತ್ಸವ ನೋಡಬೇಕು. ನಾನು ನಿನ್ನ ಉತ್ಸವದಲ್ಲಿ ಕಾರ್ಯ ಮಾಡಬೇಕು. ನಾನು ನನ್ನ ತಂಬೂರಿ ಬಾರಿಸಿದ್ದೀನಿ. ನಿನ್ನ ಉತ್ಸವಕ್ಕೆ ಮೆರಗು ಬರಬೇಕಲ್ಲ, ನನ್ನದು ಒಂದು ಚೂರು ಕಾಣಿಕೆ ಇರಲಿ ಅಂತ ನನ್ನ ಜೀವನದ ಮಧುರ ಭಾವ ತಂತಿ ಮೀಟಿದ್ದೀನಿ. ನಿನಗೆ ಸಮ್ಮತವಾಗಿರಬೇಕು ಅಂತ ಭಾವಿಸಿದ್ದೇನೆ. ನಾವೆಲ್ಲ ಜೀವನ ಅಂದರೆ ಹೋರಾಟ ಅಂತ ಭಾವಿಸಿದ್ದೇವೆ. ಕಾರಣ ನಮ್ಮ ಮನಸ್ಸು ಹಾಗಿದೆ. ರವೀಂದ್ರನಾಥ ಟಾಗೋರ್ ಹೇಳುತ್ತಾರೆ ಜೀವನ ಅಂದರೆ ಉತ್ಸವ. ಹೋರಾಟದ ದೃಷ್ಟಿಕೋನ ಇಟ್ಟುಕೊಂಡರೆ ಜಗತ್ತು ರಕ್ತ ರಕ್ತಮಯವಾಗುತ್ತದೆ. ಉತ್ಸವದ ದೃಷ್ಟಿ ಇಟ್ಟುಕೊಂಡರೆ ಜಗತ್ತು ಹೂಮಯವಾಗುತ್ತದೆ. ಮನುಷ್ಯರೇ ಹೋರಾಟ ಮಾಡುವುದು. ಯಾವ ಗಿಡ, ಪಕ್ಷಿ, ಪ್ರಾಣಿ ಹೋರಾಟ ಮಾಡಿಲ್ಲ. ಹೋರಾಟದಿಂದ ಪುಷ್ಪ ಅರಳುವುದಿಲ್ಲ. ಬದುಕಿನ ಅಂಗಳ ಜಗತ್ತಿನಲ್ಲಿ ರಕ್ತಮಯವಾಗುತ್ತದೆ. ದುಃಖದ ಅಲೆಗಳು ಏಳುತ್ತವೆ.

ಬದುಕು ಹಾಡಿನ ಪ್ರವಾಹ ಆಗಿರಬೇಕು. ಅದು ಸತ್ಯಮುಖಿವಾಗಿರಬೇಕು. ಜನರಿಂದಲೂ ವಿಶ್ವದಿಂದಲೂ ಕೇಳಬೇಕು. ನಾವು ಹಾಡುತ್ತ ಇರಬೇಕು. ಹಾಗೆ ಜೀವನ ರೂಪಿಸುವುದೇ ಭಕ್ತಿ ಸಾಧನ. ರವೀಂದ್ರನಾಥ ಟ್ಯಾಗೋರ್ ಹೇಳುತ್ತಾರೆ ತಂತಿ ಬಾರಿಸುವಾಗ ದೇವನೇ ನಿನ್ನನ್ನು ಮರೆತೆ, ನನ್ನನ್ನು ಮರೆತೆ, ವೀಣೆಯ ನಾದದಲ್ಲಿ ನಾನು ಮರೆತೆ. ನನ್ನ ಕೊನೆ ಕ್ಷಣ ಬರ್ತಾ ಇದೆ. ದಾರಿ ಕಾಯ್ತಾ ಇದ್ದೇನೆ ಭಗವಂತನೇ. ಈ ವೀಣೆ ನಿನಗೆ ಒಪ್ಪಿಸಲು ಕಾಯುತ್ತಿದ್ದೇನೆ. ಎರಡು ಕೆಲಸ ಮಾಡುವುದು. ಅದು ಮಧುರವಾಗಿರಬೇಕು. ಎಲ್ಲಿ ಉತ್ಸಾಹ ಇರುತ್ತದೆಯೋ ಅದು ಉತ್ಸವವಾಗುತ್ತದೆ. ನಮ್ಮ ದೇಹ, ಮನ ವೀಣೆ, ಭಾವಗಳು ಕಾಣದಂತಹ ತಂತಿಗಳು, ಸುಮ್ಮನೆ ಬಾರಿಸುತ್ತಿರಬೇಕು. ಏನೇ ಮಾಡಿದರು ಮಧುರತೆ ಹೋಗಬಾರದು. ಆಗ ಬದುಕು ಸುಂದರ. ಅಲ್ಲವೇ?

**- ಎಂ.ಪಿ. ಜ್ಞಾನೇಶ್,** ಮಂಗಳೂರು

# ಪೆಹಲ್ಗಾಮ್ ದಾಳಿಯಿಂದ ಪಾಕಿಸ್ತಾನ ಘನತೆ ಹೆಚ್ಚಿದೆ

## ಲಷ್ಕರ್ ಕಮಾಂಡರ್ ಹೇಳಿಕೆ | ಇಸ್ರೇಲ್-ಅಮೇರಿಕಾ ಮಧ್ಯೆ ಸಂಧಾನ ಪ್ರಕ್ರಿಯೆ

• ಪ್ರಜೋದಯ ವರದಿ

**ನವದೆಹಲಿ:** ಅಮೇರಿಕಾ-ಇರಾನ್ ನಡುವೆ ಸಂಧಾನ ಮಾತುಕತೆ ನಡೆಯಲು ಪೆಹಲ್ಗಾಮ್ ದಾಳಿಯೇ ಕಾರಣವೆಂದು ಲಷ್ಕರ್ ಕಮಾಂಡರ್ ಅಬು ಮೂಸಾ ಕಾಶ್ಮೀರಿ ಹೇಳಿದ್ದಾನೆ.

ಈ ಮೂಲಕ ಪಹಲ್ಗಾಮ್ ಉಗ್ರ ಕೃತ್ಯದ ಹಿಂದೆ ಪಾಕ್ ಕೈವಾಡ ಇರುವುದು ಮತ್ತೊಮ್ಮೆ ಸ್ಪಷ್ಟವಾ ಗಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪಾಕಿಸ್ತಾನದ ಘನತೆ ಹೆಚ್ಚಾಗಲು ಸಹಾಯ ಮಾಡಿದೆ. ಜಾಗತಿಕ ವೇದಿಕೆ ಯಲ್ಲಿ ಪ್ರಾಮುಖ್ಯತೆ ಕೂಡ ಹೆಚ್ಚಾಗಿದ್ದು, ಅಮೇ ರಿಕಾ ಮತ್ತು ಇರಾನ್ ನಡುವೆ ಮಧ್ಯಸ್ಥಿಕೆ ವಹಿ ಸಲೂ ಅವಕಾಶ ಸಿಕ್ಕಿದೆ ಎಂದು ಹೇಳಿದ್ದಾನೆ. ಈ ಹೇಳಿಕೆಯು ಪಾಕಿಸ್ತಾನದ ಮೇಲಿನ ಆರೋಪಗ ಳನ್ನ ಮತ್ತಷ್ಟು ಬಲ ಪಡಿಸಿದೆ. ಜೊತೆಗೆ ಅಮಾಯ ಕರ ರಕ್ತ ಹರಿಸಿದ ದಾಳಿಯನ್ನ ಪಾಕಿಸ್ತಾನ ರಾಜತಾಂತ್ರಿಕ ಸಾಧನವಾಗಿ ಬಳಸಿಕೊಳ್ಳುವ ಹೇಯ ಕೃತ್ಯಕ್ಕೆ ಮುಂದಾಗಿದೆ ಎನ್ನುವುದು ಗೊತ್ತಾಗಿದೆ.

2025ರ ಏ.22ರಂದು ಕಾಶ್ಮೀರದ ಪೆಹಲ್ಗಾಮ್ ನಲ್ಲಿ ಉಗ್ರರು ಅಟ್ಟಹಾಸ ಮೆರೆದಿದ್ದರು. ಸುಂದರ ತಾಣದಲ್ಲಿ ವಿಹರಿಸುತ್ತಿದ್ದ ಪ್ರವಾಸಿಗರ ಮೇಲೆ ಗುಂಡಿನ ಮಳೆಗರೆದು ನೆತ್ತರು ಹರಿಸಿದ್ದರು ಪಾಕ್ ಉಗ್ರರು. ಅದಕ್ಕೆ ಹೆಜ್ಜೆ-ಹೆಜ್ಜೆಗೂ ದಿಟ್ಟ ಉತ್ತರ ನೀಡುತ್ತಲೇ ಬಂದಿದ್ದ ಭಾರತೀಯ ಸೇನೆ, ಪ್ರತೀಕಾರಕ್ಕಾಗಿ ಕಾಯುತ್ತಲೇ ಇತ್ತು. ಕೊನೆಗೂ ಸಿಕ್ಕ ಸಮಯ ಬಳಸಿಕೊಂಡ ಭಾರತೀಯ ಸೇನೆ ನರಮೇಧ ನಡೆಸಿದ್ದ ಪಾತಕಿಗಳನ್ನು ಹತ್ಯೆಗೈದಿತು.



ಶ್ರೀನಗರದ ದಚಿಗಮ್ ಅರಣ್ಯ ಪ್ರದೇಶದಲ್ಲಿ ಆಪರೇಷನ್ ಸಿಂಧೂರ ಕಾರ್ಯಾಚರಣೆ ವೇಳೆ ಮೂವರು ಉಗ್ರರನ್ನು ಭಾರತೀಯ ಸೇನೆ ಹತ್ಯೆಗೈದಿತ್ತು.

ಆದರೆ ಈ ನರಮೇಧವು ಪಾಕಿಸ್ತಾನ ಭಯೋತ್ಪಾದನೆಯ ವಿರುದ್ಧ ನಿಜವಾಗಿಯೂ ಪ್ರಾಮಾಣಿಕ ಕ್ರಮ ತೆಗೆದುಕೊಳ್ಳುತ್ತಿದೆಯೇ ಅಥವಾ ಇಬ್ಬಗೆಯ ನೀತಿ ಅನುಸರಿಸುತ್ತಿದೆಯೇ ಎಂಬ ಚರ್ಚೆಯನ್ನು ಹುಟ್ಟು ಹಾಕಿತ್ತು. ಆದರೆ ಆಪರೇಷನ್ ಸಿಂಧೂರ ಕಾರ್ಯಾಚರಣೆ ಬಳಿಕ ಪಾಕ್ ಮುಖವಾಡವನ್ನು ಭಾರತ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಕಳಚುತ್ತಲೇ ಬಂದಿತು. ಇದೀಗ ಇರಾನ್-ಅಮೇರಿಕಾ ಮಾತುಕತೆಯ ನಡುವೆ ಲಷ್ಕರ್ ಕಮಾಂಡ್ ಹೇಳಿಕೆ ಪಾಕ್ ಬಂಡವಾಳ ಬಯಲು ಮಾಡಿದೆ.

**ಪಾಕಿಸ್ತಾನದಲ್ಲಿ ಶಾಂತಿ ಸಭೆ**

ಸಾವಿರಾರು ಜನರ ಸಾವಿಗೆ ಕಾರಣವಾಗಿರುವ, ಜಾಗತಿಕ ಇಂಧನ ಪೂರೈಕೆಯಲ್ಲಿ ಸಮಸ್ಯೆ ಉಂಟು ಮಾಡಿದ, ವಿಶ್ವದ ಆರ್ಥಿಕತೆಗೆ ಹೊಡೆತ ನೀಡಿರುವ ಪಶ್ಚಿಮ ಏಷ್ಯಾ ಯುದ್ಧವನ್ನು ಅಂತ್ಯಗೊಳಿಸುವ ನಿಟ್ಟಿನಲ್ಲಿ ಅಮೇರಿಕಾ ಮತ್ತು ಇರಾನ್‌ನ ಉನ್ನತ ಅಧಿಕಾರಿಗಳು ಶನಿವಾರ ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಸಭೆ ಸೇರಿದ್ದಾರೆ.

ಲೆಬನಾನ್‌ನಲ್ಲಿ ಕದನ ವಿರಾಮ ಜಾರಿಗೊಳಿಸುವುದು, ತನ್ನ ಮೇಲೆ ಹೇರಿರುವ ನಿರ್ಬಂಧ ಗಳನ್ನು ತೆಗೆದು ಹಾಕುವ ಬಗ್ಗೆ ಅಮೇರಿಕ ಬದ್ಧತೆ ಪ್ರದರ್ಶಿಸಿದ ನಂತರವೇ ಔಪಚಾರಿಕ ಮಾತುಕತೆಗಳು ಪ್ರಾರಂಭವಾಗ ಬಹುದು ಎಂದು ಇರಾನ್ ಪಟ್ಟು ಹಿಡಿದಿದೆ. ಈ ಹಿನ್ನಲೆಯಲ್ಲಿ ಉಭಯ ದೇಶಗಳ ನಡುವೆ ಚರ್ಚೆಯಾಗಲಿರುವ ವಿಷಯಗಳು ಗಂಭೀರತೆ ಪಡೆದಿವೆ.

ಲೆಬನಾನ್‌ನಲ್ಲಿ ಕದನ ವಿರಾಮಕ್ಕೆ ಇರಾನ್ ಆಗ್ರಹಿಸುತ್ತಿದೆ. ಮಾರ್ಚ್‌ನಲ್ಲಿ ಸಂಘರ್ಷ ಪ್ರಾರಂಭವಾದಾಗಿನಿಂದ ಇರಾನ್ ಬೆಂಬಲಿತ ಹಿಜ್ಬುಲ್ಲಾ ಬಂಡುಕೋರರ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಸುಮಾರು 2,000 ಜನರು ಮೃತರಾಗಿದ್ದಾರೆ. ಲೆಬನಾನ್ ಕಾರ್ಯಾಚರ ಣೆಯು ಕದನ ವಿರಾಮದ ಭಾಗವಲ್ಲವೆಂದು ಇಸ್ರೇಲ್ ಮತ್ತು ಅಮೇರಿಕಾ ಹೇಳಿದ್ದರೆ, ಇದು ಅದರ ಭಾಗವೇ ಎಂದು ಇರಾನ್ ಪ್ರತಿಪಾದಿಸುತ್ತಿದೆ.

ತನ್ನ ಆಸ್ತಿಗಳ ಮೇಲಿನ ಮುಟ್ಟುಗೋಲನ್ನು ಹಿಂಪಡೆಯಲು ಮತ್ತು ವರ್ಷಗಳಿಂದ ತನ್ನ ಆರ್ಥಿಕತೆಯನ್ನು ಹೈರಾಣಾಗಿಸಿರುವ ನಿರ್ಬಂಧಗಳನ್ನು ಕೊನೆಗೊಳಿಸಲು ಅಮೇರಿಕಾವನ್ನು ಇರಾನ್ ಒತ್ತಾಯಿಸುತ್ತಿದೆ. ಇರಾನ್ ತನ್ನ ಪರಮಾಣು ಮತ್ತು ಕ್ಷಿಪಣಿ ಕಾರ್ಯಕ್ರಮಗಳಲ್ಲಿ ರಿಯಾಯಿತಿ ನೀಡಿದಲ್ಲಿ ಮಾತ್ರ ಮಹತ್ವದ ನಿರ್ಬಂಧಗಳ ಸಡಿಲಿಕೆಗೆ ಸಿದ್ಧವಿರುವುದಾಗಿ ಅಮೇರಿಕಾ ಹೇಳಿದೆ. ಹೊರ್ಮುಜ್ ಜಲಸಂಧಿಯ ಮೇಲೆ ತನ್ನ ಅಧಿಕಾರವನ್ನು ಒಪ್ಪಿಕೊಳ್ಳ ಬೇಕೆಂದು ಇರಾನ್ ಬಯಸುತ್ತಿದೆ. ಅಲ್ಲಿ ಶುಲ್ಕವನ್ನು ಸಂಗ್ರಹಿಸುವುದು ಮತ್ತು ಪ್ರವೇಶವನ್ನು ನಿಯಂತ್ರಿಸುವುದು ಅದರ ಉದ್ದೇಶವಾಗಿದೆ. ಆದರೆ, ಯಾವುದೇ ಶುಲ್ಕ ಅಥವಾ ಮಿತಿಗಳಿಲ್ಲದೆ ತೈಲ ಟ್ಯಾಂಕರ್‌ಗಳು ಮತ್ತು ಇತರ ಸಂಚಾರಕ್ಕೆ ಇದನ್ನು ಮುಕ್ತವಾಗಿಡಬೇಕೆಂದು ಅಮೇರಿಕಾ ಬಯಸಿದೆ. ಆರು ವಾರಗಳ ಯುದ್ಧದಲ್ಲಿ ಉಂಟಾದ ಎಲ್ಲಾ ಹಾನಿಗಳಿಗೆ ಇರಾನ್ ಪರಿಹಾರವನ್ನು ಕೋರುವ ನಿರೀಕ್ಷೆಯಿದೆ. ಈ ಬಗ್ಗೆ ಅಮೇರಿಕಾ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಯುರೇನಿಯಂ ಸಮೃದ್ಧೀಕರಣಕ್ಕೆ ಅವಕಾಶ ನೀಡಬೇಕೆಂದು ಇರಾನ್ ಬಯ ಸುತ್ತಿದೆ. ಆದರೆ ಅಮೇರಿಕಾ ಅದನ್ನು ತಳ್ಳಿಹಾಕಿದೆ. ಇದು ಮಾತುಕತೆಗೆ ಒಳಪಡದ ವಿಷಯ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಇರಾನ್‌ನ ಕ್ಷಿಪಣಿ ಸಾಮರ್ಥ್ಯ ಗಳನ್ನು ತೀವ್ರವಾಗಿ ಕಡಿತಗೊಳಿಸಬೇಕೆಂದು ಇಸ್ರೇಲ್ ಮತ್ತು ಅಮೇರಿಕಾ ಎರಡೂ ಬಯಸುತ್ತಿವೆ. ಆದರೆ ತನ್ನ ಬೃಹತ್ ಕ್ಷಿಪಣಿ ಭಂಡಾರದ ವಿಷಯದಲ್ಲಿ ಯಾವುದೇ ರಾಜಿ ಇಲ್ಲ ಎಂದು ಇರಾನ್ ಹೇಳಿದೆ.

# ನುಸುಳುಕೋರರು ಗಂಟು ಮೂಟೆ ಕಟ್ಟಿ: ಪ್ರಧಾನಿ ಮೋದಿ

• ಪ್ರಜೋದಯ ವರದಿ

**ನವದೆಹಲಿ:** ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಮತುವಾ, ನಮಸುದ್ರ ಹಾಗು ಇನ್ನಿತರ ನಿರಾಶ್ರಿತ ಸಮುದಾಯಗಳಿಗೆ ಸಿಎಎ ಅಡಿಯಲ್ಲಿ ಪೌರತ್ವ ನೀಡುವುದಾಗಿ ಪ್ರಧಾನಿ ಮೋದಿ ಅವರು ಭರವಸೆ ನೀಡಿದ್ದು, ನುಸುಳುಕೋರರು ಗಂಟು ಮೂಟೆ ಕಟ್ಟಿ ಎಂದು ಎಚ್ಚರಿಕೆ ನೀಡಿದ್ದಾರೆ.

ಪಶ್ಚಿಮ ಬಂಗಾಳದ ಪೂರ್ವ ವರ್ಧಮಾನ್ ಜಿಲ್ಲೆಯ ಕಟ್ವಾದಲ್ಲಿ ನಡೆದ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಮತುವಾ ಮತ್ತು ನಮಸುದ್ರ ಸಮುದಾಯಗಳ ಭವಿಷ್ಯವನ್ನು ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಅಲ್ಲ, ಸಂವಿಧಾನ ಮತ್ತು ಸಿಎಎ ರಕ್ಷಿಸಿದೆ ಎಂದು ಹೇಳಿದ್ದಾರೆ.

ಇವೆರಡು ದಕ್ಷಿಣ ಬಂಗಾಳದಲ್ಲಿ ರಾಜಕೀಯವಾಗಿ ಪ್ರಭಾವಶಾಲಿಯಾಗಿರುವ ನಿರಾಶ್ರಿತರ ಗುಂಪಾಗಿವೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರ ಬಂದರೆ, ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಮಾತ್ರವಲ್ಲ ಸಬ್ ಕಾ ಹಿಸಾಬ್ ಮಂತ್ರವನ್ನು ಪಾಲಿಸುತ್ತದೆ. ಆದರೆ ಲೂಟಿಕೋರರು ಹಾಗು ದಬ್ಬಾಳಿಕೆದಾರರನ್ನು ಕಟಕಟೆಯಲ್ಲಿ ನಿಲ್ಲಿಸಲಾಗುವುದು ಎಂದಿದ್ದಾರೆ.

ಬಂಗಾಳದಲ್ಲಿರುವ ಮತುವಾ,



ನಮಸುದ್ರ, ಹಾಗು ಎಲ್ಲಾ ನಿರಾಶ್ರಿತ ಸಮುದಾಯಗಳಿಗೆ ಗ್ಯಾರಂಟಿ ನೀಡಲು ನಾನು ಇಲ್ಲಿಗೆ ಬಂದಿದ್ದೇನೆ. ಟಿಎಂಸಿಯ ಯಾವುದೇ ನಾಯಕನ ಕೃಪೆಯಿಂದ ನೀವು ಇಲ್ಲಿ ಇಲ್ಲ, ಸಂವಿಧಾನದ ರಕ್ಷಣೆಯಿಂದ ನೀವು ಇಲ್ಲಿ ಇದ್ದೀರಿ ಎಂದು ಹೇಳಿದ್ದಾರೆ.

ಈ ಸಮುದಾಯಗಳ ರಕ್ಷಣೆಗೆ, ನಿರಾಶ್ರಿತರಿಗೆ ಪೌರತ್ವ ಕಲ್ಪಿಸಲು ಮೋದಿ ಸಿಎಎ ಕಾನೂನು ತಂದಿದ್ದಾರೆ. ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚನೆಯಾದ ಕೂಡಲೇ ನಿರಾಶ್ರಿತರಿಗೆ ಸಿಎಎ ಅಡಿಯಲ್ಲಿ ಪೌರತ್ವ ನೀಡುವ ಕೆಲಸ ಮಾಡಲಾಗುವುದು ಎಂದರು.

ಆರೋಪಿತ ಕಾನೂನು ಬಾಹಿರ ನಿರಾಶ್ರಿತರ ವಿರುದ್ಧ ಕಿಡಿ ಕಾರಿದ ಮೋದಿ, ಬಿಜೆಪಿ ಸರ್ಕಾರ ಬಂಗಾಳವನ್ನು ಮತ್ತೊಂದು ದೊಡ್ಡ ಸಮಸ್ಯೆಯಿಂದ ಮುಕ್ತಿಗೊಳಿಸಲಿದೆ. ಭಾರತಕ್ಕೆ ಒಳನುಸುಳಿದವರನ್ನು ಹೊರದಬ್ಬಲಾಗುವುದು ಎಂದು ಹೇಳಿದ್ದಾರೆ.

ನಿಮಗೆ ಸೇರಿದ ಎಲ್ಲಾ ವಸ್ತುಗಳನ್ನು ಗಂಟು ಕಟ್ಟಿ ಎಂದು ನಾನು ನುಸುಳುಕೋರರಿಗೆ ಹೇಳುತ್ತೇನೆ. ನೀವು ನಿರ್ಗಮಿಸುವ ಸಮಯ ಬಂದಿದೆ ಎಂದು ಹೇಳಿದರು. ಈ ವೇಳೆ ಜನರಿಂದ ಹರ್ಷೋದ್ಗಾರ ಮೊಳಗಿತು. ನುಸುಳುಕೋರರಿಗೆ ಆಶ್ರಯ ನೀಡಿದವರೂ ಪರಿಣಾಮ ಎದುರಿಸಲಿದ್ದಾರೆಂದು ಮೋದಿ ಎಚ್ಚರಿಕೆ ನೀಡಿದ್ದಾರೆ.

# ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಭೂಮಿಪೂಜೆ



**ಅರಕಲಗೂಡು:** ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿ ದೊಡ್ಡಬೆಮ್ಮತ್ತಿ ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಎ.ಮಂಜು ಅವರು ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಕಳೆದ ವರ್ಷ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯ ಸಂದರ್ಭದಲ್ಲಿ ದೊಡ್ಡಬೆಮ್ಮತ್ತಿ ಗ್ರಾಮದಲ್ಲಿ ಗ್ರಾಮ ವಾಸ್ತವ್ಯ ನಡೆಸಿದ ವೇಳೆ ಗ್ರಾಮಸ್ಥರಿಗೆ ನೀಡಿದ ಭರವಸೆಯಂತೆ ಈ ಕಾಮಗಾರಿಯನ್ನು ಆರಂಭಿಸಲಾಗಿದೆ. ಈ ರಸ್ತೆ ಕಾಮಗಾರಿಯನ್ನು ಒಂದು ತಿಂಗಳೊಳಗೆ ಗುಣ ಮಟ್ಟದೊಂದಿಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆಂದು ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು, ಹಿರಿಯರು, ಜೆಡಿಎಸ್ ಕಾರ್ಯಕರ್ತರು ಇದ್ದರು.

# ಎಂಸಿಇ ಕಾಲೇಜಿನಲ್ಲಿ ಆಟೋ ಎಕ್ಸ್‌ಪೋ 2026



• ಪ್ರಜೋದಯ ವರದಿ

**ಹಾಸನ:** ಮಲೆನಾಡು ಇಂಜಿನೀಯರಿಂಗ್ ಕಾಲೇಜು ರೋಟ್ರಾಕ್ಟ್ ಕ್ಲಬ್ ವತಿಯಿಂದ ಆಟೋ ಎಕ್ಸ್ ಪೋ 2026 ಕಾರ್ಯಕ್ರಮ ಕಾಲೇಜಿನ ಮೈದಾನದಲ್ಲಿ ನಡೆಯಿತು.

ವಿವಿಧ ರೀತಿಯ ಹೊಸ ಮಾದರಿಯ ಕಾರು ಮತ್ತು ಬೈಕ್‌ಗಳು ಬೆಂಕಿಯುಗುಳುತ್ತಾ ಚಲಿಸುವುದನ್ನೇ ಸಾರ್ವಜನಿಕರು ತದೇಕಚಿತ್ತದಿಂದ ವೀಕ್ಷಿಸಿದರು. ವಾಹನಗಳ ಜೋರು ಶಬ್ದ ಹಾಗು ವೇಗ ವೀಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ಅವರು ಮಾತನಾಡಿ, ಹಿಂದೆಲ್ಲಾ ಅಂಬಾಸಿಡರ್‌ಗಳಂತಹ ಕಾರು ನೋಡುವುದೇ ಕಣ್ಣಿಗೆ ಹಬ್ಬವಾಗಿರುತ್ತಿತ್ತು. ಕಾಲ ಬದಲಾದಂತೆ ಹಲವಾರು ನೂತನ ಕಾರು, ಬೈಕ್‌ಗಳು ಮಾರುಕಟ್ಟೆಗೆ ಪ್ರವೇಶ ಪಡೆದು ಅವುಗಳನ್ನು ನೋಡುವ ಕಾಲ ಬಂದಿದೆ. ಹೊಸ ಹೊಸ ಮಾದರಿ ಕಾರುಗಳನ್ನು ಖರೀದಿಸಿ ಜನರು ಸಂತಸ ಪಡುತ್ತಿದ್ದಾರೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್ ಅವರು ಮಾತನಾಡಿ, ಹೊಸ ಕಾರುಗಳ ಶಬ್ದ ಹಾಗು ವೇಗವನ್ನು ನೋಡಿ ವಿದ್ಯಾರ್ಥಿಗಳು ಸಂತಸಪಟ್ಟಿದ್ದಾರೆ. ವಿಜ್ಞಾನ, ತಾಂತ್ರಿಕತೆ ಬೆಳೆದಂತೆ ಹೊಸ ಹೊಸ ಆವಿಷ್ಕಾರಗಳ ಮೂಲಕ ತಯಾರಾದ ವಾಹನಗಳು ಮಾರುಕಟ್ಟೆಗೆ ಬಂದಿವೆ ಎಂದರು. ಆಟೋ ಎಕ್ಸ್ ಪೋ 2026ರ ಯಶಸ್ಸಿಗೆ ವಿದ್ಯಾರ್ಥಿಗಳು ಹಾಗು ರೋಟ್ರಾಕ್ಟ್ ಕ್ಲಬ್ ಸಾಕಷ್ಟು ಶ್ರಮ ವಹಿಸಿದೆ ಎಂದರು. ಪ್ರಭಾರ ಪ್ರಾಂಶುಪಾಲ ಡಾ.ರಾಜಣ್ಣ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ಇಂದ್ರ, ಬಹುದ್ದೂರು, ಸಹ ಅಧಿಕಾರಿ ಡಾ.ಶಿವಶಂಕರ್, ರೋಟ್ರಾಕ್ಟ್ ಕ್ಲಬ್ ಪದಾಧಿಕಾರಿಗಳು ಭಾಗಹಿಸಿದ್ದರು.

# ಏ.13 ರಿಂದ ಶಂಕರ ಮಠದಲ್ಲಿ ಹಾಸನ ಸೀರೆ ಹಬ್ಬ

• ಪ್ರಜೋದಯ ವರದಿ



**ಹಾಸನ:** ನಗರದ ಶಂಕರ ಮಠದ ಆವರಣದಲ್ಲಿ ಏ.13 ರಿಂದ 15ರ ವರೆಗೆ ಅವಿರಾ ಉಡುಪು ವತಿಯಿಂದ ಹಾಸನ ಸೀರೆ ಹಬ್ಬ ಹಮ್ಮಿಕೊಳ್ಳಲಾಗಿದೆ ಎಂದು ನಟಿ ಹಾಗು ಉದ್ಯಮಿ ಕಾರುಣ್ಯಗೌಡ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಪ್ರತಿದಿನ ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 9ರ ವರೆಗೆ ನಡೆಯಲಿದೆ. ವಿವಿಧ ರೀತಿಯ ಪ್ಯೂರ್ ಮೈಸೂರು ಕ್ರೇಪ್, ಪ್ಯೂರ್ ಬನಾರಸ್, ಟಿಶ್ಯೂ, ಪ್ಯೂರ್ ಮುದಲ್, ಪೆನ್ಕಲಂಕರಿ, ಹತ್ತಿ ಸೀರೆ, ಕಟ್‌ವರ್ಕ್, ಕಸೂತಿ ಸೀರೆ, ಪ್ರಿಂಟ್ ಸೀರೆ ಹಾಗು ದೈನಂದಿನ ಉಡುಗೆ ಉಡುಗೆ ಸೀರೆಗಳು ರಿಯಾಯಿತಿ ದರದಲ್ಲಿ ಲಭ್ಯವಿವೆ ಎಂದರು.

ಒಂದು ಸೀರೆ ಖರೀದಿಸಿದರೆ ಮತ್ತೊಂದು ಸೀರೆ ಉಚಿತವಾಗಿ ಸಿಗಲಿದೆ. 1000 ಸಾವಿರ ರೂ.ಗಳಿಂದ 20 ಸಾವಿರ ರೂ. ವರೆಗೆ ಸೀರೆ ಇವೆ. ಕಾಂಚೀಪುರಂ ಸೀರೆ ಹೊರತುಪಡಿಸಿ ಎಲ್ಲಾ ರೀತಿಯ ಪ್ಯೂರ್ ಸಿಲ್ಕ್ ಸೀರೆ ಲಭ್ಯ ಇವೆ. ಹೆಂಗಳೆಯರಿಗೆ ಹೊಂದುವ ಗುಣಮಟ್ಟದ, ಅತ್ಯಾಕರ್ಷಕ ಸೀರೆಗಳನ್ನು ಮಾರಾಟಕ್ಕೆ ಇಡಲಾಗುವುದೆಂದರು. ಈಗಾಗಲೇ ಮೈಸೂರು, ಶಿವಮೊಗ್ಗಾ, ತುಮಕೂರಲ್ಲಿ ನಡೆದ ಹಬ್ಬ ಯಶಸ್ವಿಯಾಗಿದೆ. ಈಗ ಹಾಸನದಲ್ಲಿ ನಡೆಯು ತ್ತಿದ್ದು, ಮುಂದೆ ತಿಂಗಳಿಗೆ 2 ಜಿಲ್ಲೆಯಲ್ಲಿ ಆಯೋಜನೆ ಮಾಡುವ ಉದ್ದೇಶವಿದೆ ಎಂದರು.

# ಜಿಲ್ಲೆಯಲ್ಲಿ ನಿಯಮಬದ್ಧ ಟ್ರಕ್ಕಿಂಗ್ ಅವಕಾಶಕ್ಕೆ ಚಿಂತನೆ

» ಮೊದಲನೇ ಪುಟದಿಂದ

**ಸ್ಥಳೀಯರಿಗೆ ಉದ್ಯೋಗಾವಕಾಶ**


ಈ ಯೋಜನೆಯಿಂದ ಸ್ಥಳೀಯ ಯುವಕರಿಗೆ ಗೈಡ್, ಹೋಂಸ್ಟೇ, ಸಾರಿಗೆ ಹಾಗು ಆಹಾರ ವ್ಯವಸ್ಥೆಯಲ್ಲಿ ಉದ್ಯೋಗ ಸಿಗಲಿದೆ. ಗ್ರಾಮೀಣ ಆರ್ಥಿಕತೆಗೆ ಉತ್ತೇಜನ ನೀಡುವ ಪ್ರಮುಖ ಹೆಜ್ಜೆಯಾಗಿ ಇದನ್ನು ನೋಡಲಾಗುತ್ತಿದೆ. ಅರಣ್ಯ ಪ್ರದೇಶ ಗಳಲ್ಲಿ ನಿರ್ಬಂಧವಿಲ್ಲದ ಪ್ರವಾಸೋದ್ಯಮದಿಂದ ಉಂಟಾಗುವ ಹಾನಿಯನ್ನು ತಪ್ಪಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ. ಜೀವ ವೈವಿಧ್ಯತೆ ಸಂರಕ್ಷಣೆ, ಅರಣ್ಯ ಜೀವಿಗಳ ಸುರಕ್ಷತೆ ಮತ್ತು ಕಾಡಿನ ಶಾಂತತೆಯನ್ನು ಕಾಪಾಡುವುದು ಮುಖ್ಯ ಗುರಿಯಾಗಿದೆ.

ಸಂಪೂರ್ಣ ಮಾರ್ಗಸೂಚಿ ಸಿದ್ಧವಾದ ಬಳಿಕ ಅಧಿಕೃತ ಘೋಷಣೆ ಮಾಡಲಾಗುವುದು. ಬಳಿಕ ಟ್ರಕ್ಕಿಂಗ್‌ಗೆ ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಹಾಗು ಸ್ಥಳೀಯ ಮಟ್ಟದಲ್ಲಿ ಸಹಾಯ ಕೇಂದ್ರಗಳನ್ನು ತೆರೆಯುವ ಸಾಧ್ಯತೆ ಇದೆ. ಜಿಲ್ಲೆಯಲ್ಲಿ ನಿಯಮಬದ್ಧ ಟ್ರೆಕ್ಕಿಂಗ್ ರೂಪಿಸುವತ್ತ ಜಿಲ್ಲಾಡಳಿತದ ಈ ಹೆಜ್ಜೆ ಪ್ರವಾಸೋದ್ಯಮ, ಪರಿಸರ ಸಂರಕ್ಷಣೆ ಮತ್ತು ಸ್ಥಳೀಯ ಆರ್ಥಿಕತೆಯ ಸಮತೋಲನ ಸಾಧಿಸಲು ಅನುಕೂಲ ಮಾಡಿಕೊಡಲಿದೆ.

**ಜಿಲ್ಲೆಗೆ ಪ್ರವಾಸಿಗರು ಬರಬೇಕು**

ಪ್ರವಾಸಿಗರು-ಸ್ಥಳೀಯರ ನಡುವೆ ಸಮಬಾಳ್ವೆಯ ವಿಶ್ವಾಸ ಇಡುವ ಕೆಲಸ ಆಗಬೇಕು. ಜಿಲ್ಲೆಗೆ ಪ್ರವಾಸಿಗರು ಬರಬೇಕು, ಅವರಿಂದ ಬೇರೆಯವರಿಗೆ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ರೂಪಿಸುವ ಕೆಲಸ ನಮ್ಮ ಕಡೆಯಿಂದ ಆಗಬೇಕು. ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಕೆಲಸವನ್ನು ಜಿಲ್ಲಾಡಳಿತ ಮಾಡಲಿದೆ. ಸಕಲೇಶಪುರ ತಾಲ್ಲೂಕಿನಲ್ಲಿರುವ ಪಟ್ಲಬೆಟ್ಟ, ಗವಿಬೆಟ್ಟ, ಮೂರುಕಣ್ಣುಗುಡ್ಡ, ಹೊಸಹಳ್ಳಿಗುಡ್ಡ, ಅರಸೀಕೆರೆ ತಾಲ್ಲೂಕಿನ ಜೇನುಕಲ್ಲುಬೆಟ್ಟಗಳ ಪ್ರಕೃತಿಕ ಸೌಂದರ್ಯ ಸವಿಯಲು ಪ್ರವಾಸಿಗರು ಬರುತ್ತಾರೆ. ಅವರಿಗೆ ಅನುಕೂಲ ಕಲ್ಪಿಸುವ ವ್ಯವಸ್ಥೆಯನ್ನು ಮಾಡುವ ನಿಲ್ಲಿನಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ತಿಳಿಸಿದ್ದಾರೆ.

# ಕಾಂಗ್ರೆಸ್ ಕಾರ್ಮಿಕ ವಿಭಾಗಕ್ಕೆ ಶಿವಪ್ರಕಾಶ್ ನೇಮಕ



**ಸಕಲೇಶಪುರ: ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಕಾರ್ಮಿಕ ವಿಭಾಗದ ಸಕಲೇಶಪುರ ಬ್ಲಾಕ್ ಅಧ್ಯಕ್ಷರನ್ನಾಗಿ ಇ.ಆರ್.ಶಿವಪ್ರಕಾಶ್ ಅವರನ್ನು ನೇಮಕ ಮಾಡಲಾಗಿದೆ.**

**ಇ.ಆರ್.ಶಿವಪ್ರಕಾಶ್ ಅವರಿಗೆ ಕಾಂಗ್ರೆಸ್ ಮುಖಂಡ ಮುರಳಿ ಮೋಹನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೈರಮುಡಿ ಚಂದ್ರು ಅವರು ನೇಮಕಾತಿ ಆದೇಶ ಪತ್ರವನ್ನು ವಿತರಣೆ ಮಾಡಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಬ್ಯಾಕರವಳ್ಳಿ ವಿಜಯ್, ಉದಯ್, ಬೈಕೆರೆ ದೇವರಾಜು, ಸಂಗಪ್ಪಣ್ಣ ಹಾಜರಿದ್ದರು.**

# ನಾಪತ್ತೆಯಾದವರ ಪತ್ತೆಗೆ ಮನವಿ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರೀಸಾವೆ ಹೋಬಳಿ ಚಿಕ್ಕೋನಹಳ್ಳಿ ಗ್ರಾಮದ ಸಿ.ಆರ್. ನಾಗರಾಜೇಗೌಡ (76) ನಾಪತ್ತೆಯಾಗಿದ್ದು, ಅವರ ಸುಳಿಸುವ ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಲು ಕೋರಿದೆ.

ನಾಗರಾಜೇಗೌಡ ಅವರು 2025ರ ಸೆ.3ರ ಬೆಳಿಗ್ಗೆ 9 ಗಂಟೆಗೆ ಮನೆಯಿಂದ ಹೊರ ಹೋದವರು ವಾಪಾಸ್ಸಾಗಿಲ್ಲ. ಗಾಬರಿಗೊಂಡ ಕುಟುಂಬಸ್ಥರು, ಸ್ನೇಹಿತರು ಮತ್ತು ಸಂಬಂಧಿಕರ ಮನೆಗಳಲ್ಲಿ ಹುಡುಕಿದರೂ ಪತ್ತೆಯಾಗದ ಕಾರಣ ಆತಂಕಕ್ಕೆ ಒಳಗಾಗಿದ್ದಾರೆ. ನಾಗರಾಜೇಗೌಡ ಅವರು ಮೊದಲು ನಾಲ್ಕೈದು ಬಾರಿ ಇದೇ ರೀತಿ ಸಂಬಂಧಿಕರ ಮನೆಗಳಿಗೆ ಹಬ್ಬಕ್ಕೆಂದು ತೆರಳುತ್ತಿದ್ದವರು. ಹಲವು ಬಾರಿ ತಿಂಗಳಾದರೂ ಮನೆಗೆ ಹಿಂದಿರು ಗುತಿರಲಿಲ್ಲ. ಆದರೆ ಈ ಬಾರಿ ಹೋದವರು 6 ತಿಂಗಳಾದರೂ ಹಿಂದಿರುಗಿಲ್ಲ. ಹಿರೀಸಾವೆ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿದೆ.

# ವೈಭವದ ಶೆಟ್ಟಾಳಮ್ಮ ದೇವಿ ಜಾತ್ರಾ ಮಹೋತ್ಸವ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಶೆಟ್ಟಿಹಳ್ಳಿ ಗ್ರಾಮದಲ್ಲಿ ಶೆಟ್ಟಾಳಮ್ಮ ದೇವಿಯ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶನಿವಾರ ಅದ್ದೂರಿಯಾಗಿ ಜರುಗಿತು.

ನಾಲ್ಕು ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವ ಹಿನ್ನಲೆಯಲ್ಲಿ ವಿವಿಧ ಪೂಜಾ ಕೈಂಕರ್ಯ ಕೈಗೊಳ್ಳಲಾಯಿತು. ಶನಿವಾರ ಬೆಳಿಗ್ಗೆಯಿಂದಲೇ ಮೂಲ ದೇವರಿಗೆ ವಿವಿಧ ಅಭಿಷೇಕ, ಪುಣ್ಯಾಹ ನೆರವೇರಿಸಲಾಯಿತು. ಉತ್ಸವ ಮೂರ್ತಿಗಳಾದ ಶೆಟ್ಟಾಳಮ್ಮ, ಸಂತ್ಯಮ್ಮ ದೇವರಿಗೆ ಅಲಂಕಾರ ಮಾಡಲಾಯಿತು. ಶೆಟ್ಟಾಳಮ್ಮ ದೇವಿಯ ಉತ್ಸವ ಮೂರ್ತಿಯನ್ನು ಸೋಮ ದೇವರುಗಳೊಂದಿಗೆ ದೇವಸ್ಥಾನದ ಸುತ್ತ ಪ್ರದಕ್ಷಣೆ ಮಾಡಿದ ನಂತರ ಗೊನೆ ತುಂಬಿದ ಬಾಳೆ ಕಂಬ ನೆಟ್ಟು ರಾಸುಗೂಳು ಹಾಕಿದ ನಂತರ ಪಾತಪ್ಪ ಸೋಮನಿಂದ ಬಾಳೆ ಛೇದನ ಮಾಡಲಾಯಿತು.

ಭಕ್ತರು ಹಣ್ಣು ಜವನ ಎಸೆದು ದೇವಸ್ಥಾನದ ಸುತ್ತ ರಥವನ್ನು ಎಳೆದು ಜೈಕಾರ ಮೊಳಗಿಸಿದರು. ಶುಕ್ರವಾರ



ಸಿಡಿ ಉತ್ಸವ ಜರುಗಿತು. ಸುತ್ತಲಿನ 7 ಹಳ್ಳಿ ಗ್ರಾಮಗಳು ಸೇರಿ ಆಚರಿಸುವ ಶೆಟ್ಟಾಳಮ್ಮ ಜಾತ್ರಾ ಮಹೋತ್ಸವ 4 ದಿನಗಳ ಕಾಲ ಜರುಗಲಿದ್ದು, ಶುಕ್ರವಾರ ಮುಂಜಾನೆಯ ದಿಂಡಗೂರಿನಿಂದ ಶೆಟ್ಟಾಳಮ್ಮ ಹಾಗು ಸಂತ್ಯಮ್ಮ ಉತ್ಸವ ಮೂರ್ತಿಗಳನ್ನು ಶೆಟ್ಟಿಹಳ್ಳಿಗೆ ಕರೆ ತರಲಾಗುತ್ತದೆ. ಆ ವೇಳೆಗಾಗಲೇ ಒಂದು ತಂಡ ದೇವಸ್ಥಾನದ ಬಳಿ ರಥವನ್ನು ತಂದು ಸಿಂಗರಿಸುತ್ತಾರೆ.

ಸಂಜೆ ಹರಕೆ ಹೊತ್ತಿದ್ದ ಮಹಿಳೆಯರು ಬಾಯಿ ಬೀಗ ಚುಚ್ಚಿಸಿಕೊಂಡು ಮಡೆ ಹೊತ್ತುಕೊಂಡು ದೇವಸ್ಥಾನದವರೆಗೆ ಬರುತ್ತಾರೆ. ಯುವಕರು ಬಂಡಿ ಕಟ್ಟಿಕೊಂಡು ಬಂದರೆ ಮತ್ತೊಂದು ತಂಡ ತಳುಗೆ ಹೊತ್ತುಕೊಂಡು ಬರುತ್ತಾರೆ. ಶೆಟ್ಟಿಹಳ್ಳಿ ಬಂಡಿಯ ಜೊತೆಗೆ ಕುರುಬರು ಕಾಳೇನಹಳ್ಳಿಯ ಬಂಡಿಯು ಕೂಡ ಸೇರಿಕೊಳ್ಳುತ್ತದೆ. ದೇವಸ್ಥಾನವನ್ನು ಮೂರು ಸುತ್ತು ಪ್ರದಕ್ಷಣೆ ಹಾಕಿದ ನಂತರ ಸಿಡಿ ಉತ್ಸವ ನಡೆಸುವುದು ಪ್ರತೀತಿ.

ಸಂಜೆ ವೇಳೆಗೆ ರಥದಿಂದ ಉತ್ಸವ ಮೂರ್ತಿಯನ್ನು ಕೆಳಗಿಳಿಸಿ ದೇವಸ್ಥಾನದಿಂದ ಊರಿನವರೆಗೆ ಮೆರವಣಿಗೆ ತರಲಾಗುತ್ತದೆ. ನಂತರ ಊರ ಮಧ್ಯದಲ್ಲಿ ಬಲಿಕೊಟ್ಟು ಸೋಮನ ಕುಣಿತ ಹಮ್ಮಿಕೊಳ್ಳಲಾಗಿತ್ತು.

ಸುತ್ತಮುತ್ತಲ ಗ್ರಾಮಗಳಾದ ಅರಳಾಪುರ, ದಿಂಡಗೂರು ಚಿಕ್ಕೇನಹಳ್ಳಿ, ವಳಗೇರ ಸೋಮನಹಳ್ಳಿ, ಜೋಗಿಪುರ ನಂದಿಪುರ, ಕುರುಬರ ಕಾಳೇನಹಳ್ಳಿ ಮುಂತಾದ ಗ್ರಾಮಗಳ ಭಕ್ತರು ಆಗಮಿಸಿದ್ದರು. ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಶಾಸಕ ಸಿ.ಎನ್. ಬಾಲಕೃಷ್ಣ ಅವರ ಪುತ್ರ ಜೈದೀಪ್ ಪೂಜೆಯಲ್ಲಿ ಪಾಲ್ಗೊಂಡರು.

# ಅಧಿಕಾರಿಗಳ ಕೈವಾಡ: ದೇವಸ್ಥಾನದ ಆಸ್ತಿ ಖಾಸಗಿ ವ್ಯಕ್ತಿ ಪಾಲು

## ಕಂದಾಯ ಸಚಿವ ಕೃಷ್ಣಬೈರೇಗೌಡಗೆ ಸಾರ್ವಜನಿಕರ ದೂರು

• ಪ್ರಜೋದಯ ವರದಿ

**ಬೇಲೂರು:** ವಿಶ್ವವಿಖ್ಯಾತ ಬೇಲೂರಿನಲ್ಲಿ ಕಂದಾಯ ಮತ್ತು ಪುರಸಭೆ ಅಧಿಕಾರಿಗಳ ಕರಾಮತ್ತಿನಿಂದಾಗಿ ಐತಿಹಾಸಿಕ ದೇವಾಲಯಕ್ಕೆ ಸೇರಿದ ಕೋಟ್ಯಾಂತರ ರೂಪಾಯಿ ಮೌಲ್ಯದ ಸಾರ್ವಜನಿಕ ಆಸ್ತಿ ಖಾಸಗಿ ವ್ಯಕ್ತಿಯ ಪಾಲಾಗಿದೆ.

ವಿದ್ಯಾಗಣಪತಿ ಟ್ರಸ್ಟ್ ಹೆಸರಿನಲ್ಲಿದ್ದ ಜಮೀನನ್ನು ನಕಲಿ ದಾಖಲೆಗಳ ಮೂಲಕ ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ ಅಂಶ ಬೆಳಕಿಗೆ ಬಂದಿದೆ. ಪುರಸಭೆಯ ಸರ್ವೆ ನಂಬರ್ 27ರಲ್ಲಿ ಸುಮಾರು 50 ವರ್ಷಗಳಿಂದ ವಿದ್ಯಾಗಣಪತಿ ಟ್ರಸ್ಟ್ ಹೆಸರಿನಲ್ಲಿ 20 ಗುಂಟೆ ಭೂಮಿ ಇತ್ತು. ಈ ಪೈಕಿ 10 ಗುಂಟೆಯನ್ನು ಅರ್ಚಕರಿಗೆ ನೀಡಲಾಗಿತ್ತು. 1995ರಲ್ಲಿ ಅರ್ಚಕರು ತಮಗೆ ಮಂಜೂರಾಗಿದ್ದ 10 ಗುಂಟೆಯನ್ನು ಖಾಸಗಿ ವ್ಯಕ್ತಿಗೆ ಮಾರಾಟ ಮಾಡಿದ್ದರು. ಭೂಮಿ ಖರೀದಿ ಮಾಡಿದ ವ್ಯಕ್ತಿ ಅಧಿಕಾರಿಗಳ ಜೊತೆ ಶಾಮೀಲಾಗಿ, ತಾನು ಖರೀದಿಸಿದ 10 ಗುಂಟೆಯ ಜೊತೆಗೆ ದೇವಾಲಯಕ್ಕೆ ಸೇರಿದ ಉಳಿದ 10 ಗುಂಟೆಯನ್ನೂ ಸೇರಿಸಿ ಅಕ್ರಮವಾಗಿ ಖಾತೆ ಮಾಡಿಸಿ ಕೊಂಡಿದ್ದಾರೆ.

ಅನ್ಯಕ್ರಾಂತ (ಅಲಿನೇಷನ್) ಮಾಡುವಾಗ ದಿಕ್ಕುಗಳನ್ನು ಅದಲು ಬದಲು ಮಾಡಿ ನಕ್ಷೆ ತಯಾರಿಸಲಾಗಿದೆ. ಕೇವಲ 10 ಸಾವಿರ ಅಡಿ ಜಾಗಕ್ಕೆ ದಾಖಲೆ ಇರಬೇಕಾಗಿದ್ದರೂ, ಪುರಸಭೆ ಅಧಿಕಾರಿಗಳು ಬರೋಬ್ಬರಿ 24 ಸಾವಿರ ಅಡಿಗೆ ಇ-ಸ್ವತ್ತು ಮಾಡಿಕೊಟ್ಟಿದ್ದಾರೆ. ಈ ಅಕ್ರಮದ ಬಗ್ಗೆ ದೂರು ನೀಡಿ ದ್ದರೂ, 2019ರಲ್ಲಿ ಅಧಿಕಾರಿಗಳು ಅದೇ ಅಕ್ರಮ ಅಳತೆಗೆ ದಾಖಲೆ ನೀಡಿ ರುವುದು ಜನಾಕ್ರೋಶಕ್ಕೆ ಕಾರಣವಾಗಿದೆ.

**ತನಿಖೆಗೆ ಉಸ್ತುವಾರಿ ಸಚಿವರ ಆದೇಶ**

ಬೇಲೂರಿನಲ್ಲಿ ನಡೆದ ಜನಸ್ಪಂದನಾ ಸಭೆಯಲ್ಲಿ ಈ ಬಗ್ಗೆ ದೂರು ಕೇಳಿ ಬರುತ್ತಿದ್ದಂತೆಯೇ ಜಿಲ್ಲಾ ಉಸ್ತುವಾರಿ ಸಚಿವರು ಅಧಿಕಾರಿಗಳ ವಿರುದ್ಧ ಗರಂ ಆಗಿದ್ದಾರೆ. ಮೇಲ್ನೋಟಕ್ಕೆ ಅಕ್ರಮ ನಡೆದಿರುವುದು ಕಂಡುಬಂದ ಹಿನ್ನಲೆಯಲ್ಲಿ, ಒಂದು ವಾರದೊಳಗೆ ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

# ಪಂಜಾಬ್‌ಗೆ ಜಯ

**ಮುಲ್ಲನಪುರ:** ಐಪಿಎಲ್ ಟೂರ್ನಿಯ 17ನೇ ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ ಪಂಜಾಬ್ ಕಿಂಗ್ಸ್ ತಂಡವು ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ 6 ವಿಕೆಟ್‌ಗಳ ಗೆಲುವು ಸಾಧಿಸಿತು.

ಮುಲ್ಲನಪುರದ ಮಹಾರಾಜ ಯಾದವೀಂದ್ರ ಸಿಂಗ್ ಅಂತರ ರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಎಸ್‌ಆರ್‌ಎಚ್ ತಂಡವು ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ(74ರನ್), ಟ್ರಾವಿಸ್‌ಹೆಡ್ (38 ರನ್), ಕ್ಲಾಸೆನ್ (39 ರನ್) ಅವರ ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳ ಅಂತ್ಯಕ್ಕೆ 6 ವಿಕೆಟ್ ನಷ್ಟಕ್ಕೆ 219 ರನ್ ಗಳಿಸಿತ್ತು. ಪಂಜಾಬ್ ಪರ ಅರ್ಷದೀಪ್ ಸಿಂಗ್, ಶಶಾಂಕ್ ಸಿಂಗ್ ತಲಾ 2 ವಿಕೆಟ್ ಕಬಳಿಸಿದರು.

220 ರನ್ ಗುರಿ ಬೆನ್ನಟ್ಟಿದ ಪಂಜಾಬ್ ಕಿಂಗ್ಸ್ ತಂಡಕ್ಕೆ ಪ್ರಿಯಾಂಶ್ ಆರ್ಯ (57 ರನ್) ಹಾಗೂ ಪ್ರಭಸಿಮ್ರನ್ ಸಿಂಗ್ (51 ರನ್) ಉತ್ತಮ ಆರಂಭ ಒದಗಿಸಿದರು. ಯುವ ಸ್ಪಿನ್ನರ್ ಶಿವಂಗ್ ಕುಮಾರ್ 3 ವಿಕೆಟ್ ಪಡೆದರು. ನಾಯಕನ ಆಟವಾಡಿದ ಶ್ರೇಯಸ್ ಅಯ್ಯರ್ ಅಜೇಯ 69 ರನ್ ಗಳಿಸುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು.

# ಪ್ರಾಥಮಿಕ ಶಿಕ್ಷಕರ ಚುನಾವಣೆಯಲ್ಲಿ ನಿಯಮ ಉಲ್ಲಂಘನೆ ಆರೋಪ

• ಪ್ರಜೋದಯ ವರದಿ

**ಸಕಲೇಶಪುರ:** ನಿಯಮಾವಳಿ ಗಾಳಿಗೆ ತೂರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯನ್ನು ಮಾಡಲಾಗುತ್ತಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ತಮ್ಮಣ್ಣಶೆಟ್ಟಿ ಅವರು ಆರೋಪಿಸಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯನ್ನು ರಾಜ್ಯ ಸಂಘದವರು ಕೆಲವರ ಪಿತೂರಿಯಿಂದ ನಿಯಮಗಳನ್ನು ಗಾಳಿಗೆ ತೂರಿ ತಮಗೆ ಇಷ್ಟ ಬಂದ ಹಾಗೆ ಚುನಾವಣೆ ಮಾಡುತ್ತಿದ್ದಾರೆ. ಚುನಾವಣೆ ಮಾರ್ಗಸೂಚಿ 2026ರ ಏ. 1ರಂದು ಬಿಡು ಗಡೆಯಾಗಿದೆ. ತಾಲ್ಲೂಕಿಗೆ ಅದನ್ನು ಶುಕ್ರವಾರ ವಾಟ್ಸಪ್ ಮುಖಾಂತರ ಚುನಾವಣಾಧಿಕಾರಿಗೆ ಕಳುಹಿಸಿದ್ದಾರೆ. ಮತದಾರರ ಪಟ್ಟಿಯನ್ನು ಸಹ ಈಗ ಕಳುಹಿಸಿದ್ದಾರೆ. ಮತದಾರರ ಪಟ್ಟಿಯಲ್ಲಿ ನನ್ನ ಹೆಸರನ್ನು ಹಾಗು ಚುನಾವಣೆ ಆಕಾಂಕ್ಷಿ ಜಗದೀಶ್ ಅವರ ಹೆಸರು ಕೈ ಬಿಟ್ಟಿದ್ದಾರೆ. ಚುನಾವಣೆಯನ್ನು ಯಾವುದೇ ರೀತಿಯಲ್ಲಿ ಕ್ರಮಬದ್ಧವಾಗಿ ನಡೆಸುತ್ತಿಲ್ಲ, ತಮಗೆ ಬೇಕಾದವರನ್ನು ಗೆಲ್ಲಿಸಲು ಈ ರೀತಿ ಅಡ್ಡದಾರಿ ಹಿಡಿಯುತ್ತಿದ್ದಾರೆಂದರು.

ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆ ಆಕಾಂಕ್ಷಿ ಜಗದೀಶ್ ಅವರು ಮಾತನಾಡಿ, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಒಟ್ಟು 6 ಸ್ಥಾನಗಳಿಗೆ ಚುನಾವಣೆ ನಡೆಯ ಬೇಕಾಗಿದ್ದು ನಾನು ಸಹ ಪ್ರಬಲ ಆಕಾಂಕ್ಷಿಯಾಗಿದ್ದೆ. ಈ ನಿಟ್ಟಿನಲ್ಲಿ ಕಳೆದ 5 ವರ್ಷಗಳಿಂದ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬಂದಿದ್ದೇವೆ. ಆದರೆ ಇದೀಗ ನನ್ನ ಹಾಗು ನೌಕರರ ಸಂಘದ ರಾಜ್ಯ ಸಂಘಟನಾ ಕಾರ್ಯ ದರ್ಶಿ ತಮ್ಮಣ್ಣ ಶೆಟ್ಟರ ಹೆಸರನ್ನು ಮತ ದಾರರ ಪಟ್ಟಿಯಿಂದ ಕೈ ಬಿಟ್ಟಿದ್ದಾರೆ. ಅದರಲ್ಲಿ ನಮ್ಮ ಎದುರಾಳಿಗಳಾದ ಕೈವಾಡವಿದೆ. ನಾನು ಹಾಗು ತಮ್ಮಣ್ಣ ಶೆಟ್ಟರು 5 ವರ್ಷಗಳಿಂದ ಸದಸ್ಯತ್ವ ಶುಲ್ಕವನ್ನು ಕಟ್ಟಿರುವ ದಾಖಲಾತಿ ಇದೆ. ಚುನಾವಣೆಗೆ ನಾಮಪತ್ರ ಸಲ್ಲಿಸಲು ಭಾನುವಾರ ಸಂಜೆ 6 ಗಂಟೆ ವರೆಗೆ ಅವಕಾಶವಿದ್ದು, ನಾವು ನ್ಯಾಯಾಲಯಕ್ಕೆ ಹೋಗ ಬಾರದೆಂದು ಈ ರೀತಿ ಮಾಡಿದ್ದಾರೆ. ಅದಕ್ಕೆಲ್ಲಾ ನಾವು ಹೆದರು ವುದಿಲ್ಲ, ನನ್ನ ಪರವಾಗಿ ಬೇರೆ ಅಭ್ಯರ್ಥಿಯನ್ನು ನಮ್ಮ ಬಣದಿಂದ ಕಣಕ್ಕಿಳಿಸುತ್ತೇವೆ. ಸೋಮವಾರ ನಾವು ನಮ್ಮ ಮತದಾನ ಹಕ್ಕನ್ನು ಕಡಿತಗೊಳಿಸಿರುವ ಹಿನ್ನಲೆಯಲ್ಲಿ ನ್ಯಾಯಾಲಯದ ಮೊರೆ ಹೋಗುತ್ತೇವೆ. ಒಟ್ಟಾರೆ ಯಾಗಿ ಈ ಚುನಾವಣೆ ಅಕ್ರಮವಾಗಿ, ನಿಯಮಗಳನ್ನು ಉಲ್ಲಂಘನೆ ಮಾಡಿ ಮಾಡಲಾಗುತ್ತಿರುವುದು ಪ್ರಜಾಪ್ರಭುತ್ವ ವಿರೋಧಿಯಾಗಿದೆ ಎಂದರು.

**ಪಾರದರ್ಶಕ ಚುನಾವಣೆಗೆ ಕ್ರಮ**

ಚುನಾವಣಾಧಿಕಾರಿ ಶತೇಂದ್ರ ಕುಮಾರ್ ಅವರು ಮಾತನಾಡಿ, ನನ್ನನ್ನು ಚುನಾವಣಾಧಿ ಕಾರಿಯಾಗಿ ನೇಮಕಾತಿ ಮಾಡುವ ಕುರಿತು ರಾಜ್ಯ ಸಂಘದವರು 4 ದಿನಗಳ ಹಿಂದೆ ಗಮನಕ್ಕೆ ತಂದಿದ್ದರು. ರಾಜ್ಯ ಸಂಘದಿಂದ ಚುನಾವಣೆ ನಡೆಸಲು ಮಾರ್ಗಸೂಚಿ ಬಂದ ಹಿನ್ನಲೆಯಲ್ಲಿ ನಾಮಪತ್ರ ಪಡೆಯುತ್ತಿದ್ದೇವೆ. ಮತದಾರರ ಪಟ್ಟಿಯನ್ನು ಕೇಳಿದವರಿಗೆ ಜೆರಾಕ್ಸ್ ಮೂಲಕ ನೀಡಲಾಗುತ್ತಿದೆ. ಮತದಾರರ ಪಟ್ಟಿಯಲ್ಲಿ ಇಲ್ಲದವರು ದಾಖಲಾತಿ ನೀಡಿದರೆ ಅದನ್ನು ರಾಜ್ಯ ಸಂಘದವರ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದರು. ಒಟ್ಟಾರೆಯಾಗಿ ಚುನಾವಣೆ ಪಾರದರ್ಶಕವಾಗಿ ನಡೆಯಬೇಕು ಎಂದರು.

# ಏ.14ರಿಂದ ಜಾತಿ ವಿನಾಶ ಕುರಿತು ಸರಣಿ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಸವಣ್ಣ ಅವರ ಜಯಂತಿ ಅಂಗವಾಗಿ ಏ.14 ರಿಂದ 20ರ ವರೆಗೆ ನಗರದಲ್ಲಿ ಜಾತಿ ವಿನಾಶ ಕುರಿತು ಸರಣಿ ಕಾರ್ಯಕ್ರಮ ಹಮ್ಮಿಕೊಳ್ಳ ಲಾಗಿದೆ.

ಡಿಹೆಚ್‌ಎಸ್, ಎಸ್‌ಎಫ್‌ಐ, ಡಿವೈಎಫ್‌ಐ, ಬಿಜಿಬಿಎಸ್, ಜೆಎಂಎಸ್, ಸಿಐಟಿಯು ಮತ್ತು ಕೆಪಿಆರ್‌ಎಸ್ ಸಂಘಟನೆಗಳ ವತಿಯಿಂದ ಸರಣಿ ಚರ್ಚೆ, ಚಿಂತನ-ಮಂಥನ ಕಾರ್ಯಕ್ರಮ ನಡೆಯಲಿದೆ. ಅಂಬೇಡ್ಕರ್ ಜಯಂತಿ ಅಂಗವಾಗಿ ಏ.14 ರಂದು ಮಧ್ಯಾಹ್ನ 12 ರಿಂದ ಸಂಜೆ 5 ಗಂಟೆ ವರೆಗೆ ನಗರದ ಆರ್.ಸಿ.ರಸ್ತೆಯಲ್ಲಿರುವ ಶ್ರಮ ಸಿಐಟಿಯು ಕಚೇರಿಯಲ್ಲಿ ಅಂಬೇಡ್ಕರರ ಜಾತಿ ವಿನಾಶ ಕೃತಿಯ ಸಾಮೂಹಿಕ ಓದು ಮತ್ತು ಸಮಕಾಲೀನ ವಿಶ್ಲೇಷಣೆ ನಡೆಯಲಿದೆ. ಏ.16ರಂದು ಸಂಜೆ 6 ಗಂಟೆಗೆ ನಗರದ ಮೆಟ್ರಿಕ್ ನಂತರದ ಹಾಸ್ಟೆಲ್‌ನಲ್ಲಿ ಜಾತಿ ವಿನಾಶ ಕೃತಿಯ ಕುರಿತು ಉಪನ್ಯಾಸ ನಡೆಯಲಿದೆ.

ಏ.18 ಸಂಜೆ 6 ಗಂಟೆಗೆ ಸಿಐಟಿಯು ಕಚೇರಿಯಲ್ಲಿ ಭಾರತದಲ್ಲಿ ಜಾತಿ, ಅಸ್ಪೃಶ್ಯತೆಯ ಉಗಮ, ಬೆಳವಣಿಗೆ ಮತ್ತು ವಿನಾಶ ಕುರಿತು ವಿಶೇಷ ಉಪನ್ಯಾಸ ಹಾಗು ಚರ್ಚೆ ಇರಲಿದೆ. ಏ.20ರಂದು ಬಸವ ಜಯಂತಿ ಅಂಗವಾಗಿ ನಗರದ ಕೆ.ಆರ್. ಪುರಂನಲ್ಲಿರುವ ಬ್ಯಾಂಕ್ ನೌಕರರ ಸಂಘದ ಮಾಜಿ ಅಧ್ಯಕ್ಷ ಪರಮ ಶಿವಯ್ಯ ಅವರ ಮನೆಯಲ್ಲಿ ಜಾತಿ ತಾರತಮ್ಯ-ಅಸ್ಪೃಶ್ಯತೆಗಳ ವಿರುದ್ಧದ ಬಸವಣ್ಣ ಸೇರಿ ವಿವಿಧ ವಚನಕಾರರ ವಚನಗಳ ವಾಚನ ಮತ್ತು ಗಾಯನ ಹಮ್ಮಿಕೊಳ್ಳಲಾಗಿದೆ.

ಬಸವಣ್ಣ ಮತ್ತು ಅಂಬೇಡ್ಕರ್ ಇಬ್ಬರೂ ಈ ದೇಶದಲ್ಲಿ ಜಾತಿಯತೆಯನ್ನು ನಾಶಗೊಳಿಸಿ, ಸಮಾನತೆಯ ಸಮಾಜ ನಿರ್ಮಾಣದ ಕನಸು ಕಂಡಿದ್ದರು. ಅದಕ್ಕಾಗಿ ತಮ್ಮ ಜೀವನವನ್ನೆ ಮುಡುಪಾಗಿಟ್ಟು ಅವಿರತವಾಗಿ ದುಡಿದು ಮಡಿದರು. ಅವರ ಕನ ಸನ್ನು ಈಡೇರಿಸುವ ನಿಟ್ಟಿನಲ್ಲಿ ನಾವುಗಳೆಲ್ಲರೂ ಅವರ ಆಶಯ, ಚಿಂತನೆಗಳ ಆಧಾರದಲ್ಲಿ ಜಾತಿ ವ್ಯವಸ್ಥೆಯನ್ನು ನಾಶಗೊಳಿಸಿ, ಸಾಮರಸ್ಯದ ಸಮ ಸಮಾಜದ ನಿರ್ಮಾಣಕ್ಕಾಗಿ ಐಕ್ಯತೆಯಿಂದ ಚಳುವಳಿಯನ್ನು ಮುನ್ನಡೆಸಲು ಕಾರ್ಯಕ್ರಮದಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಎಂ.ಜಿ. ಪೃಥ್ವಿ ಅವರು ಕೋರಿದ್ದಾರೆ.

# ಪ್ರಧಾನಿ ಮೋದಿ-ರಾಹುಲ್ ಗಾಂಧಿ ಸೌಹಾರ್ದ ಮಾತುಕತೆ

• ಪ್ರಜೋದಯ ವರದಿ

**ನವದೆಹಲಿ:** ದೇಶದಲ್ಲಿರುವ ಧ್ರುವೀಕರಣ ರಾಜಕೀಯ ವಾತಾವರಣದಲ್ಲಿ ಅತ್ಯಂತ ಅಪರೂಪ ಎನಿಸುವಂತಹ ವಿದ್ಯಮಾನವೊಂದು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಶನಿವಾರ ನಡೆದಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸಂಸತ್ ಆವರಣದಲ್ಲಿ ಪರಸ್ಪರ ಸೌಹಾರ್ದಯುತವಾಗಿ ಮಾತುಕತೆ ನಡೆಸಿದರು. ಇದರ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ.

ಸಮಾಜ ಸುಧಾರಕ ಮಹಾತ್ಮ ಜ್ಯೋತಿರಾವ್ ಫುಲೆ ಅವರ 200ನೇ ಜನ್ಮ ದಿನೋತ್ಸವ ಅಂಗವಾಗಿ ಅವರಿಗೆ ಪುಷ್ಪ ನಮನ ಸಲ್ಲಿಸಲು ಆ ಇಬ್ಬರು ನಾಯಕರು ಸಂಸತ್ ಆವರಣದಲ್ಲಿ ಸೇರಿದ್ದರು. ಫುಲೆ ಅವರಿಗೆ ಪುಷ್ಪ ನಮನ ಸಲ್ಲಿಸಿದ ಬಳಿಕ ಸ್ಪೀಕರ್ ಓಂ ಬಿರ್ಲಾ, ಸಚಿವರಾದ ಜೆ.ಪಿ.ನಡ್ಡಾ, ಅರ್ಜುನ್ ರಾಮ್ ಮೇಘವಾಲ್ ಹಾಗು ರಾಹುಲ್ ಗಾಂಧಿ ಸೇರಿ ಇತರ ನಾಯಕರನ್ನು ಅಭಿನಂದಿಸಿದರು. ನಂತರ ವಿಶೇಷವಾಗಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಬಳಿ ನಿಂತು ಕೆಲ ಕಾಲ



ಮಾತನಾಡಿದರು.

ಇತ್ತೀಚೆಗೆ ಆಸ್ಪತ್ರೆಗೆ ದಾಖಲಾಗಿದ್ದ ಸೋನಿಯಾ ಗಾಂಧಿ ಅವರ ಆರೋಗ್ಯದ ಬಗ್ಗೆ ಪ್ರಧಾನಿ ಮೋದಿ ವಿಚಾರಿಸಿದ್ದಾರೆ. ತಾಯಿಯ ಆರೋಗ್ಯ ಸುಧಾರಿಸುತ್ತಿದೆಯೆಂದು ರಾಹುಲ್ ಹೇಳಿ ದ್ದಾರೆ. ಅದಕ್ಕೆ ಪ್ರಧಾನಿ ಸಂತಸ ವ್ಯಕ್ತಪಡಿಸಿ, ಸೋನಿಯಾ ಗಾಂಧಿ ಚೇತರಿಕೆಗೆ ಶುಭ ಹಾರೈಸಿ ದ್ದಾರೆಂದು ಮೂಲಗಳು ತಿಳಿಸಿವೆ.

ಸೋನಿಯಾ ಗಾಂಧಿ ಅವರು ಜ್ವರ ಮತ್ತು ಇತರೆ ಸೋಂಕಿನಿಂದ ಮಾ. 24ರಂದು ಗಂಗಾರಾಮ್ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆಯ ನಂತರ ಚೇತರಿಸಿಕೊಂಡ ಅವರು ಮಾ. 31ರಂದು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದರು. ಶನಿವಾರ ಬೆಳಿಗ್ಗೆ ಸಾಮಾಜಿಕ ಮಾಧ್ಯಮ ಎಕ್ಸ್ ಪೋಸ್ಟ್ ಹಾಕಿದ್ದ ಪ್ರಧಾನಿ ಮೋದಿ, ಶಿಕ್ಷಣ ಮತ್ತು ಸರ್ವರ ಕಲ್ಯಾಣ ಕುರಿತಾದ ಫುಲೆ ಅವರ ಚಿಂತನೆಗಳು ಇಂದಿನ ದಿನಗಳಲ್ಲಿ ಹೆಚ್ಚು ಪ್ರಸ್ತುತ ಎಂದು ಹೇಳಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019